delegation which is witnessing the proceedings of the House from the speaker's gallery.

ಶ್ರೀ ವೈ. ರಾಮಕೃಷ್ಣ : ತಮ್ಮ ಉದ್ದೇಶ ರಾಜಕೀಯದಿಂದ ಕೂಡಿದ್ದು ಮಹಾತ್ಮಗಾಂಧಿಯವರು ಗ್ರಾಮ ಸ್ವರಾಜ್ಯ ರಚನೆ ಮಾಡಬೇಕೆಂದು ಹೇಳಿದ್ದರು. ಯಾವುದನ್ನು ಅಶೋಕ ಮೆಹ್ತಾರವರು ಹೇಳಿದ್ದು, ಯಾವುದನ್ನು ಜಯಪ್ರಕಾಶ್ ನಾರಾಯಣ್ ಹೇಳಿದ್ದರು ಅವುಗಳೆಲ್ಲವನ್ನು ತಾವು ಮರೆತುಹೋಗಿಬಿಟ್ಟಿರಿ. ಅವರು ಏನು ಹೇಳುತ್ತಾರೆ, ಗ್ರಾಮಪಂಚಾಯಿತಿಗಳನ್ನು ಆಕ್ಟಿವ್ಸ್ ಮಾಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಕೈಗೆ ಅಧಿಕಾರ ಕೊಡಬೇಕು ಅವರಿಗೆ ಹಣ ಕೊಡಬೇಕು. ಈ ಕೆಲಸವನ್ನು ತಾವು ಅಮೆಂಡ್‌ಮೆಂಟ್ ನಲ್ಲಿ ಮಾಡಿದ್ದೀರಿ. ಇದಕ್ಕೆ ಸಣ್ಣ ಲೆಟರ್ ಏನಾದರೂ ಇದೆಯೇ? ನೀವು ಹೋಗುವುದಕ್ಕೆ ಮುಂಚೆ ನಾನು ಹೇಳುತ್ತಿದ್ದೇನೆ. ನೀವು ಕೊಟ್ಟಿರತಕ್ಕದ್ದು ಪಂಚಾಯಿತಿಗೆ. You have vested your powers to the Panchayat as a unit; not the Chairman of the Grama panchayat.

ಇದೇ ತತ್ವವನ್ನು ನೀವು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಅನುಸರಿಸಿಲ್ಲ. ಅದಕ್ಕೆ ನಾನು ಹೇಳಿದ್ದುದು, ಇದು ಅಪೂರ್ಣವಾಗಿದೆ, ಪೂರ್ಣವಾಗಿಲ್ಲ ಎಂದು. ಇದನ್ನು ನೀವು ಪಾಸ್ ಮಾಡಿ ಎಂದು ತಂದಿದ್ದೀರಿ. ಮತ್ತೊಂದು ವಿಚಾರ ಹೇಳುತ್ತೇನೆ, ಈ ಆಕ್ಟ್ ಏನಿದೆ ಇದರಲ್ಲಿ ತಾವು ಎಷ್ಟೆಷ್ಟು ಕರ್ತವ್ಯಗಳನ್ನು ನಿರ್ವಹಿಸಿದ್ದೀರಿ? ಇದರ ಪ್ರಕಾರ ಜಿಲ್ಲಾ ಪಂಚಾಯಿತಿಗಳಿಗೆ ತಾವು ಕೊಟ್ಟಿರತಕ್ಕ ಕೆಲಸಗಳು, 184ನೇ ಪ್ರಕರಣದಲ್ಲಿ 58 ಕೆಲಸಗಳನ್ನು ಇದಕ್ಕೆ ಒಪ್ಪಿಸಿದ್ದೀರಿ. ಷೆಡ್ಯೂಲ್-3ರ ತಿದ್ದುಪಡಿಗೆ 56 ಕೆಲಸಗಳನ್ನು ತಾವುಕೊಟ್ಟಿದ್ದೀರಿ. 145ನೇ ಪ್ರಕರಣ ಸೆಕೆಂಡ್ ಷೆಡ್ಯೂಲ್. ಅದೇ ರೀತಿ 69 ಕೆಲಸಗಳನ್ನು ತಾವು ಗ್ರಾಮ ಪಂಚಾಯಿತಿಗೆ ಕೊಟ್ಟಿದ್ದೀರಿ. ಒಂದನೇ ಷೆಡ್ಯೂಲ್ 58ನೇ ಪ್ರಕರಣ. ಅವರಿಗೆ ಕೆಲಸಗಳು ಜಾಸ್ತಿ ವಹಿಸಿರತಕ್ಕ ಕೆಲಸದ ಮೊತ್ತ ಜಾಸ್ತಿ, ಸಂಖ್ಯೆ ಜಾಸ್ತಿ ಮತ್ತು ದೇಶದಲ್ಲಿರತಕ್ಕವರು ಅವರ. ಅವರಿಗೆ ಯಾವುದೂ ಅಧಿಕಾರ ಇಲ್ಲ. ಹಾಗಾದರೆ ಅವರ ಅಧಿಕಾರ ಏನು? ಇದರಲ್ಲಿ ತಾವು ನಮೂದಿಸಿದ್ದೀರಿ. ಹಣ ಏನು ಕೊಟ್ಟಿದ್ದೀರಿ? ಏನಾದರೂ ಒಂದು ದಿನಕ್ಕೆ ಆಗುವಷ್ಟು ಹಣ ಕೊಟ್ಟಿದ್ದೀರೋ? ಅದಕ್ಕೆ ನಾನು ಹೇಳುತ್ತಿದ್ದೇನೆ, ತಾವು ಸಮಗ್ರವಾದ ತಿದ್ದುಪಡಿ ತರಬೇಕು. ಮತ್ತೊಂದು ಅಂಶವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಪಂಚಾಯಿತಿ ಜಾರಿಗೆ ಬಂದು ಒಂದು ವರ್ಷವಾಯಿತು. ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದು ಕೆಲಸಗಳನ್ನು ನಿರ್ವಹಿಸುತ್ತಿವೆ. ಯಾವ ರೀತಿ ಇವು ಕೆಲಸ ನಿರ್ವಹಿಸುತ್ತಿವೆ ಎಂದು ಇವ್ಯಾಲ್ಯುಯೇಷನ್ ರಿಪೋರ್ಟ್ ತರಿಸಿದ್ದೀರೋ? ಯಾವುದಾದರೂ ಸರ್ವೆ ಮಾಡಿ ಹತ್ತು ಪಂಚಾಯಿತಿಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಕಾಲಕಾಲಕ್ಕೆ ಸೇರುತ್ತಿವೆಯೆ, ರೆಸಲ್ಯೂಷನ್ ಪಾಸ್ ಮಾಡುತ್ತಿವೆಯೇ, ಮಾಡಿದ್ದರೆ ಅವರು ತಮ್ಮ ಗುರಿಯನ್ನು ಮುಟ್ಟಿದ್ದಾರೆಯೆ, ಅವರಿಗೇನಾದರೂ ಫೈನಾನ್ಸ್ ತೊಂದರೆಗಳು ಇವೆಯೇ? ಅವರ ಜೊತೆಯಲ್ಲಿ ನೀವು ಕೊಟ್ಟಿರತಕ್ಕ ವಿಲೇಜ್ ಅಕೌಂಟೆಂಟ್ ಕೆಲಸ ನಿರ್ವಹಣೆಗೆ ಸಹಕಾರ ಕೊಡುತ್ತಿದ್ದಾರೆಯೆ ಅಥವಾ ತಾವು ಕಳುಹಿಸಿದಂತಹ ಹಣ ಲಪಟಾಯಿಸಿಕೊಂಡು ವಿಲೇಜ್ ಅಕೌಂಟೆಂಟ್ ಛೇರ್ಮನ್ನರ ಹತ್ತಿರ ರುಜು ಹಾಕಿಕೊಂಡು ಓಡಿಹೋಗುತ್ತಿದ್ದಾನೆಯೆ? ರೋಜಗಾರ್

ಯೋಜನೆಗೆ ಬಂದಂತ ಹಣ ಈಗ ಏನಾಗಿದೆ? ತಾವು ಕೊಡತಕ್ಕ ಒಂದು ಲಕ್ಷ 25 ಸಾವಿರ ರೂಪಾಯಿ ಗ್ರಾಂಟ್ ಯಾವ ರೀತಿ ಖರ್ಚಾಗುತ್ತಿದೆ, ಅದರ ಬಗ್ಗೆ ಏನಾದರೂ ಅಸೆಸ್‌ಮೆಂಟ್ ತೋರಿಸಿದ್ದೀರಾ? ತೋರಿಸಿಲ್ಲ. ಯಾವತ್ತು ಚುನಾವಣೆ ನಡೆಸುವುದಕ್ಕೆ ತಾವು ಪ್ರಾರಂಭ ಮಾಡಿದಿರೋ, ವೋಟರ್ ಲಿಸ್ಟ ರಿವೈಸ್ ಮಾಡಿಸಿದಿರೋ ಅಂದಿನಿಂದ ಇಂದಿನಿಂದ ನಡೆದಿರುವುದು ಈ ಅಕ್ಷರಶಃ ಬರೀ ರಾಜಕೀಯ. ಅಂದರೆ ಏನು? ತಾವು ಒಪ್ಪಿಕೊಳ್ಳಬೇಕು ಮೊದಲು. ನಿಮ್ಮನ್ನು ಅಂತ ಅಲ್ಲ ನಾನು ಹೇಳುತ್ತಿರುವುದು, ಅಲ್ಲಿರತಕ್ಕ ರಾಜಕೀಯ. publication of the voters list. delimitation of the constitutencies. ಒಂದುಕಡೆ ವರ್ಗದಲ್ಲಿ 'ಎ' ವರ್ಗ 'ಬಿ' ವರ್ಗ ಎಂದು ವರ್ಗಗಳು. ಷೆಡ್ಯೂಲ್ಡ್ ಕ್ಯಾಸ್ಟ್ ಸೀಟುಗಳನ್ನು ಮುಚ್ಚಿರತಕ್ಕದ್ದು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಟ್ಟಿರತಕ್ಕ ಸ್ಥಾನಮಾನಗಳು ಏನಿವೆ ಇವುಗಳನ್ನೆಲ್ಲ ನೋಡಿದಾಗ ಏಕೆ ಬೇಕು ಸ್ವಾಮಿ ಈ ಪಂಚಾಯಿತಿ ಆಕ್ಟ್? ಯಾರಿಗೆ ಬೇಕು? ಅಲ್ಲಿ ಪೀಸ್‌ಫುಲ್ ಅಟ್ಮಾಸ್ಫಿಯರ್ ಇದೆಯೆ? ಇದೆ ಎಂದು ತಿಳಿದುಕೊಂಡಿದ್ದೀರಾ ತಾವು? ಇದಕ್ಕೆ ಯಾರು ಕಾರಣರು? ಸರ್ಕಾರದ ಹಸ್ತಕ್ಷೇಪ ಅಷ್ಟೊಂದು ಏತಕ್ಕೆ ಬಂತು ಎಂದು ನಾನು ಕೇಳುತ್ತಿದ್ದೇನೆ. ನನಗೆ ಗೊತ್ತಿದೆ, ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟುಗಳು ಆಗಬೇಕಾಗಿತ್ತು ಅಲ್ಲಿ ಒಂದೂ ಇಲ್ಲ. ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟಿಗೆ ಯೋಗ್ಯ ಅಲ್ಲವೋ ಅಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ. ಏತಕ್ಕೆ ಅಧಿಕಾರಿಗಳು ನಿಮ್ಮ ಕೈಯಲ್ಲಿದ್ದಾರೆ? ನೀವು ಹೇಳಿದ ಹಾಗೆ ಕೇಳುತ್ತಾರೆ? ಜಿಲ್ಲಾ ಪಂಚಾಯಿತಿಗಳಿಗೂ ಹಾಗೇ ಮಾಡಿದ್ದೀರಿ. ಮಾನ್ಯ ಉಪಾಧ್ಯಕ್ಷರೆ, ಒಂದು ಸಣ್ಣ ಇನ್ಸಿಡೆಂಟ್ ನನ್ನ ಬೆಂಗಳೂರು ಜಿಲ್ಲೆಯಲ್ಲಿ ನಡೆಯಿತು. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವರು ನಾಮಿನೇಷನ್ ಹಾಕತಕ್ಕ ಕ್ಷೇತ್ರದಲ್ಲಿ, ಬೆಂಗಳೂರು ನಾರ್ತ್ ಕ್ಷೇತ್ರದಲ್ಲಿ ಒಂದು ಸೀಟನ್ನು ಬಿಟ್ಟು ಬಿಟ್ಟಿದ್ದರು. ನಮ್ಮ ಪಕ್ಷದಿಂದ ಒಂದು ಹೆಸರು ಹಾಕಿರಲಿಲ್ಲ. ನನ್ನ ಹತ್ತಿರ ವೋಟರ್ ಲಿಸ್ಟ ತಂದುಕೊಟ್ಟರು; ನೋಡಿದೆ. ಏತಕ್ಕೆ ಹೆಸರು ಹಾಕಿಲ್ಲವೆಂದು ಕೇಳಿದೆ. ಆ ಜನಾಂಗದವರು ಯಾರೂ ಇಲ್ಲವೆಂದರು. ನನಗೆ ಆಶ್ಚರ್ಯವಾಯಿತು. ಆ ಜನಾಂಗದವರು ಇಲ್ಲದಿದ್ದ ಮೇಲೆ ಕ್ಷೇತ್ರವನ್ನು ಹೇಗೆ ಪ್ರತಿನಿಧಿಸುವುದಕ್ಕಾಗುತ್ತದೆ? ನಾನು ಸ್ವಲ್ಪ ಜೋರಾಗಿ ಮಾತನಾಡಿದೆ. ಮಾತನಾಡಿದಾಗ ಅವರು ಕೇಳಿಕೊಂಡು ಬಂದು ನನಗೆ ಹೇಳಿದರು ಅಲ್ಲಿರುವವರು ಎರಡೇ ಮನೆ ಸ್ವಾಮಿ. ಷೆಡ್ಯೂಲ್ಡ್ ಟ್ರೈಬಿಗೆ ಆ ಕ್ಷೇತ್ರದಲ್ಲಿ ರಿಸರ್ವ್ ಆಗಿರತಕ್ಕದ್ದು ಎರಡೇ ಮನೆ. ಅಲ್ಲಿ ಈ ಒಂದು ಕ್ಷೇತ್ರವನ್ನು ಎಸ್.ಟಿ. ಗೆ ರಿಸರ್ವ್ ಮಾಡಿದ್ದಾರೆ. ಒಂದು ಮನೆಯವರು ಕಾಂಗ್ರೆಸ್‌ನವರಿಗೆ ಹಾಕಿದ್ದಾರೆ ಮತ್ತೊಂದು ಮನೆಯವರು ಜನತಾದಳದ ಕ್ಯಾಂಡಿಡೇಟ್‌ಗೆ ಹಾಕಿದ್ದಾರೆ, ಅಲ್ಲಿ 3ನೇ ಪಕ್ಕದ ಕ್ಷೇತ್ರದಲ್ಲಿ 14 ಎಸ್.ಟಿ. ಮನೆಗಳು ಇವೆ. ಅದು ಕೂಡ 2-3 ಅಡಿ ದೂರದಲ್ಲಿ. 14 ಮನೆಗಳು ಇರುವುದನ್ನು ಬಿಟ್ಟಿದ್ದಾರೆ. ಕೇವಲ ಎರಡೇ ಮನೆಗಳು ಇರುವುದು ತೆಗೆದುಕೊಂಡಿದ್ದಾರೆ. We could not field our candidate. ಇದನ್ನು ಪ್ರಾಸಂಗಿಕವಾಗಿ ನಾನು ಹೇಳುತ್ತಿದ್ದೇನೆ. ಇದಕ್ಕೆ ಏನು ಕಾರಣ? ರಾಜಕೀಯ ಹಸ್ತಕ್ಷೇಪ. ನೀವು ಪಾಪ್ಯುಲೇಷನ್, ಜಿಯಾಗ್ರಾಫಿಕಲ್, ಇಂಟೆಗ್ರಿಟಿ ಎಲ್ಲ ತೆಗೆದುಕೊಂಡಿದ್ದೀರಾ? ಒಂದನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಮಾಡಿದ್ದು ಮಾಡಿದ್ದೆ. ಇದು ಏನಾಯಿತು ಇವತ್ತಿನ ದಿವಸ? ಯಾರು ನಿಜವಾಗಿ ಆ ಒಂದು ಕ್ಷೇತ್ರದಲ್ಲಿ ಪ್ರತಿನಿಧಿಸಬೇಕಾಗಿತ್ತು ಅಂಥವರನ್ನು ತಾವು ಪ್ರತಿನಿಧಿಸಿಲ್ಲ. ಯಾವಾಗ ಪ್ರಾತಿನಿಧ್

ಇಲ್ಲವೋ? ಬೇರೆಯವರಿಗೆ ಇಂಟರೆಸ್ಟ್ ಇಲ್ಲ. ಅನೇಕ ಸಾರಿ ಇದೇ ಮನೆಯಲ್ಲಿ ತಾವೇ ಉತ್ತರ ಕೊಟ್ಟಿದ್ದೀರಿ. ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್, ಬ್ಯಾಕವರ್ಡ್ ಕ್ಲಾಸ್ 47 ವರ್ಷಗಳಿಂದ ನಿಮಗೆ ಸಹಕಾರ ಕೊಟ್ಟಿದ್ದಾರಲ್ಲ, ಕೊಟ್ಟಿದ್ದಾರೆ. ಈಗ ರಾಜ್ಯಾಂಗದ 73 ಮತ್ತು 74ನೇ ತಿದ್ದುಪಡಿ ಆದಮೇಲೆ ಮೊದಲನೇ ಸಾರಿ ಬಂದಾಗ ಒಂದು ವರ್ಷ ನೀವು ಅವರಿಗೆ ಸಹಕಾರ ಕೊಡುವುದಕ್ಕಾಗುವುದಿಲ್ಲ. ನೀವು ಅಂದರೆ ಸರ್ಕಾರ ಅಲ್ಲ.

ಸಹಕಾರ ತಗೆದುಕೊಂಡಂಥ ಜನ ಒಂದು ವರ್ಷವಾದರೂ ಅವರಿಗೆ ಸಹಕಾರ ಕೊಡುವುದಕ್ಕೆ ತಯಾರಿಲ್ಲ ಅಂದಮೇಲೆ ಡೆಮಾಕ್ರಸಿ ನಿಜವಾಗಿಯೂ ಕೂಡ ನಮ್ಮ ದೇಶದಲ್ಲಿ ಸಕ್ಸಸ್ ಆಗುತ್ತದಾ? ಇದನ್ನು ನಾವು ಆಲೋಚನ ಮಾಡಬೇಕು. ಉಪಾಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ, ನನ್ನ ಪಾರ್ಟಿಯ ಶ್ರೀಮತಿ ಪ್ರಮೀಳಾ ಅವರು ಹೇಳಿದ್ದಾರೆ. ಇವತ್ತು ಹರಿಜನರನ್ನು ರೆಪ್ರಸೆಂಟ್ ಮಾಡತಕ್ಕ ಕಾನ್ಸ್ಟಿಟ್ಯುಯನ್ಸಿಯಲ್ಲಿ ಅಧ್ಯಕ್ಷರುಗಳಾಗಿದ್ದರೆ ಯಾವರೀತಿ ಅಲ್ಲಿ ಕೆಲಸ ನಡೆಯುತ್ತಿದೆ? ಅಲ್ಲಿನ ಅಧಿಕಾರಿಗಳು ಯಾವರೀತಿ ನಡೆದುಕೊಳ್ಳುತ್ತಿದ್ದಾರೆ? ಎನ್ನುವುದಕ್ಕೆ ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಹೊಡೆದಿದ್ದಾರೆ, ಹೊಡೆದಿದ್ದಾರೆ, ಪೋಲೀಸರು ಯಾವುದೇ ಕ್ರಮ ತಗೆದುಕೊಂಡಿಲ್ಲ. ಅವತ್ತು ಜೆ.ಎಚ್. ಪಟೇಲರು ಹೇಳಿದರು. ಹೊಡೆದವರೇನು ಪೋಲೀಸರಿಗೆ ರಿಪೋರ್ಟ್ ಮಾಡಿರಿ ಅಂತ. ರಿಪೋರ್ಟ್ ಮಾಡುವುದಲ್ಲ, ಅದು ಐ.ಪಿ.ಸಿ ಸೆಕ್ಷನ್ ಕೆಳಗೆ ಬರುವುದಲ್ಲ. ಯೋಚನೆ ಮಾಡಿ ನೋಡಿ. I think it creates revolution. mental revolution. ಸಹಿಸದೇ ಇದ್ದರೆ ಸಮಾಜ ಏನು ಮಾಡಬೇಕು? ಪುಂಡುಗಂಡಾಯ ಹಾಕಿ. ಅವರನ್ನು ಮುಂಬರತಿಪನಿಂದ ಮನೆಗೆ ಕಳುಹಿಸಿಕೊಡಿ. ಒಬ್ಬ ಮಹಿಳೆ, ಮುಗ್ಧ ಮಹಿಳೆ, ಅಧಿಕಾರ ನಡೆಸುವುದಕ್ಕೆ ನೀವೇ ಅಕ್ಟ ಕೆಳಗೆ ರಿಸರ್ವೇಷನ್ ಮಾಡಿ ಅಧಿಕಾರವನ್ನು ಕೊಟ್ಟಿದ್ದೀರಿ. ಸುಮ್ಮನೆ ಕುಳಿತುಕೊಂಡು ಅವರಿರುತ್ತಾರೆ. ಕಿತ್ತಾಡುವುದು, ಅವಳನ್ನು ಹೊಡೆಯುವುದು. ಜಗಣೆಯೊಳಗೆ ಊರು ಬಿಡಿಸಿದ್ದಾರೆ. ಇವತ್ತ ವ್ಯಥೆಪೂರ್ಣವಾಗಿ ಹೇಳುತ್ತಿದ್ದೇನೆ. ಬೇಗೂರು, ಇದು ದೊಡ್ಡ ಹೋಬಳಿ ಹೆಡ್ಕ್ವಾರ್ಟರ್ಸ್, ಅಲ್ಲಿ ಬಿಟ್ಟು ಷೆಡ್ಯೂಲ್ಡ್ಕ್ಯಾಸ್ಟ್ ಗ್ರಾಮಪಂಚಾಯತಿ ಅಧ್ಯಕ್ಷನಿಗೆ ಎಲ್ಲರೆದುರಿಗೆ ಕಪ್ಪಗೆ ಹೊಡಿದಿದ್ದಾರೆ. ಏನು ಕ್ರಮ ತಗೆದುಕೊಂಡರು? ಏನೂ ಕ್ರಮ ತಗೆದುಕೊಳ್ಳಲಿಲ್ಲ. ಅವರು ಹೇಗೆ ಕೆಲಸ ಮಾಡುವುದು? ಅವರು ಮುಂದುವರೆಯುವುದಾದರೂ ಹೇಗೆ? ನೀವು ಎಲ್ಲೆಲ್ಲಿ ಈ ವರ್ಗಗಳ ಪ್ರತಿನಿಧಿಗಳನ್ನು ನೀವು ಹಾಕಿದ್ದೀರಿ, ಅವರಿಗೆ ಬದಲ ಮಜಬೂತಾಗಿರತಕ್ಕ ವಿಲೇಜ್ ಅಕೌಂಟೆಂಟನ್ನು ಕೊಟ್ಟು ಅವರಿಗೆ ಸಹಾಯಕರಾಗಿದ್ದು ಕೆಲಸ ಮಾಡತಕ್ಕಂಥ ಸೂಚನೆಯನ್ನು ನೀವು ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಈ ಅಮೆಂಡ್ಮೆಂಟಿಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ವೈ. ರಾಮಕೃಷ್ಣ : ಈ ಅಮೆಂಡ್ಮೆಂಟಿಗೇ ನಾನು ಹೇಳುತ್ತಾ ಇರುವುದು ಸ್ವಾಮಿ. ಅಧಿಕಾರ ನೀವು ಕೊಡುತ್ತೀರಿ. ನಾನು ಹೇಳುತ್ತಾ ಇರುವುದೂ ಅದೇ. ಅಧಿಕಾರ ಕೊಡುತ್ತೀರಲ್ಲ ಅದನ್ನು ಅವರು ನಿರ್ಭಯವಾಗಿ ಚಲಾಯಿಸುವುದಕ್ಕೆ ಅವರು ಪವರ್ಫುಲ್ಲಾಗಿರಬೇಕು. ಅವರು ಪವರ್ಫುಲ್ಲಾಗಿರದಿದ್ದರೆ, ನೀವು ಅಧಿಕಾರ ಕೊಟ್ಟರೂ ಕೂಡ ಸುಖ ಇಲ್ಲ. ಸ್ವಲ್ಪ ಅವಿದ್ಯಾವಂತರು ಇರುತ್ತಾರೆ. ವಿಚಾರಗಳನ್ನು

ತಿಳಿದುಕೊಂಡಿರದಿದ್ದವರಿರುತ್ತಾರೆ. ಯಾವುದೂ ತೊಂದರೆ ಇರುವುದಿಲ್ಲ.

ಡಾ. ಎಂ. ಶಂಕರನಾಯಕ್ : ಮಂಡಲ ಪಂಚಾಯಿತಿ ಚುನಾವಣೆ ಆಗಿದ್ದುದು, ರಿಸರ್ವೇಷನ್ ಮಾಡಿರತಕ್ಕದ್ದು ಹಿಂದಿನ ಸರ್ಕಾರ ಇದ್ದಾಗ.

ಶ್ರೀ ವೈ. ರಾಮಕೃಷ್ಣ : ನಾನು ಅವರ ತಂಟೆಗೆ ಹೋಗಿಲ್ಲ. ನಾನು ಆದಕ್ಕೋಸ್ಕರ ತಮಗೆ ಹೇಳುತ್ತಾ ಇದ್ದೇನೆ ನೀವು ಎಗ್ಸಿಕ್ಯೂಟಿವ್ ಆರ್ಡರ್ ಮುಖಾಂತರವಾದರೂ, ಈಗ ನನ್ನ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಸರ್ಜಾಪುರ, ಅದು ಹೋಬಳಿ ಹೆಡ್‌ಕ್ವಾರ್ಟರ್ಸ್. ಅಲ್ಲಿ ಪಂಚಾಯಿತಿ ಅಧ್ಯಕ್ಷೆ ಷೆಡ್ಯೂಲ್ಡ್ ಕ್ಯಾಸ್ಟ್ ಮಹಿಳೆ. ಅಲ್ಲಿನ ನಿಮ್ಮ ಸೆಕ್ರೆಟರಿ ಏನು ಮಾಡಿದ? ಚೆಕ್ ಬರೆದ. 70 ಸಾವಿರ ರೂಪಾಯಿಗೆ ಚೆಕ್ ಬರೆಸಿಕೊಂಡ. ಆಕೆಯ ಕೈಯಲ್ಲಿ ಸಹಿ ಹಾಕಿಸಿಕೊಂಡ. ಚೆಕ್ಕನ್ನಿಟ್ಟುಕೊಂಡು ನಾಪತ್ತೆಯಾಗಿ ಹೊರಟುಹೋದ. ಇದುವರೆಗೂ ನಾಪತ್ತೆ. ಆಕ್ಷನ್ ತೆಗೆದುಕೊಂಡಿರಬಹುದು. ಆ ಸುದ್ದಿ ಬೇರೆ. ಈಗೇನಾಗಿದೆ? ಬೇರೆಯವರನ್ನು ನಾವು ಹಾಕಿಕೊಳ್ಳುವಹಾಗಿಲ್ಲ. ದುಡ್ಡಿಗೆ ದುಡ್ಡೂ ಹೋಯಿತು. ಕೆಲಸವೂ ನಿಂತು ಹೋಯಿತು. ಅವಮಾನವೂ ಆಯಿತು. ಆದಕ್ಕೋಸ್ಕರ ನಾನು ತಮಗೆ ಹೇಳುತ್ತಾ ಇದ್ದೇನೆ, ದಯವಿಟ್ಟು ಎಲ್ಲೆಲ್ಲಿ ರಿಸರ್ವ್ ಸೀಟಿನಲ್ಲಿ ಅಧ್ಯಕ್ಷರುಗಳಾಗಿದ್ದಾರೆ, ಉಪಾಧ್ಯಕ್ಷರುಗಳಾಗಿದ್ದಾರೆ ಅಥವಾ (ಎ) ವರ್ಗ (ಬಿ) ವರ್ಗದಲ್ಲಿ ಕೂಡ ಯಾರು ತಿಳಿವಳಿಕೆ ಸಾಲದಂಥ ಜನ ಇದ್ದಾರೆ, ಅಂಥವರ ಬಗ್ಗೆ ತಾವು ಕಳಕಳಿ ವಹಿಸಿ ಒಳ್ಳೆಯ ಹೆಸರಾಗಿರತಕ್ಕ ಅಧಿಕಾರಿಗಳನ್ನು ನೇಮಕ ಮಾಡುವುದರಿಂದ ಒಳ್ಳೆಯದಾಗುತ್ತದೆಂದು ನಾನು ಭಾವಿಸುತ್ತೇನೆ. ಅದಲ್ಲದೆ ಇವತ್ತು ಬಲವಂತರಾಯ್ ಮೆಹ್ತಾ ಕಮಿಟಿ ಇರಬಹುದು, ಅಶೋಕ್ ಮೆಹ್ತಾ ಕಮಿಟಿ ಇರಬಹುದು, ತಾವು ತೆಗೆದುನೋಡಿ. They have given more stress to the functioning of the President. ಅದನ್ನು ನಾನು ತಮಗೆ ಹೇಳುತ್ತಾ ಇರುವುದು. ತಾವು ಜಿಲ್ಲೆಯ ಅಧ್ಯಕ್ಷರಿಗೆ ಅಧಿಕಾರ ಕೊಡಬೇಕು. It is as good as the Government. ಇರುವುದೇ ಇವತ್ತು. ಇದಕ್ಕೆ ಮೇಲಧಿಕಾರಿಯಾಗಿ ಐ.ಎ.ಎಸ್. ಆಫೀಸರ್. ಮತ್ತು ಎಲ್ಲಾ ಅಧಿಕಾರಿಗಳನ್ನು ಅವರ ಕೈಗೆ ಕೊಟ್ಟಿದ್ದೀರಿ. ಅದೇನಿದೆ ಅದು. It is nothing but a mini Government. ಜನಗಳ ಕೈಗೆ ಅಧಿಕಾರ ಕೊಟ್ಟಹಾಗೆ ಏನಾಯಿತು? ಜನರ ಕೈಗೆ ಅಧಿಕಾರ ಕೊಡಬೇಕಾದರೆ ನೇರವಾಗಿ ಗ್ರಾಮಪಂಚಾಯಿತಿಗೆ ಅಧಿಕಾರ ಕೊಡಬೇಕು. ಅದನ್ನು ಚೆಕ್ ಮಾಡಿ. ನೀವು ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನು ನಂಬುತ್ತೀರಿ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ನಂಬುತ್ತೀರಿ. ಪಾಪ ವಿಲೇಜ್ ಪಂಚಾಯಿತಿ ಅಧ್ಯಕ್ಷರು ಅವರಿಗೆ ಸ್ಟಾಫ್ ಇಲ್ಲ. ನೀವು ಕೊಟ್ಟಿರುವುದೇನು? ಇವರಿಗೇನಿದೆ ಎಗ್ಸಿಕ್ಯೂಟಿವ್ ಪವರ್? ಒಬ್ಬ ವಿಲೇಜ್ ಪಂಚಾಯಿತಿ ಅಕೌಂಟೆಂಟ್, ಅವನಿಗೊಬ್ಬ ಜವಾನ. ಇಷ್ಟೆ. ಎರಡು ಜವಾನರಲ್ಲಿ ಒಬ್ಬ ಗುಡಿಸುವವನು ಇದ್ದರೆ ಇರುತ್ತಾನೆ ಇಲ್ಲದಿದ್ದರೆ ಇಲ್ಲ. ಅವನ ಮೇಲೆ ಕಂಟ್ರೋಲ್ ಮಾಡುವುದಕ್ಕೆ ಅಧಿಕಾರ ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ಮನಸ್ಸಿಲ್ಲ ಅಂದರೆ ಇನ್ನು ಯಾವರೀತಿ ಗ್ರಾಮಪಂಚಾಯಿತಿಗಳನ್ನು ನೀವು ನಂಬುತ್ತೀರಿ? ದಯವಿಟ್ಟು ನೀವು ಹೇಳಿ. ಇಲ್ಲಿನವರೆಗೂ ಜಿಲ್ಲಾ ಪಂಚಾಯಿತಿಯಲ್ಲಿ ಲಾ ಅಂಡ್ ಆರ್ಡರ್ ಬಿಟ್ಟು ಎಲ್ಲಾ ಅಧಿಕಾರಗಳನ್ನು ಕೊಟ್ಟುಬಿಟ್ಟಿದ್ದೀರಿ. ಪಿ.ಡಬ್ಲ್ಯು.ಡಿ. ಇರಬಹುದು, ಹೆಲ್ತ್ ಇರಬಹುದು, ಎಜುಕೇಷನ್ ಇರಬಹುದು, ಪ್ರತಿಯೊಂದು

ಅಧಿಕಾರವನ್ನು ನೀವು ಜಿಲ್ಲಾಧ್ಯಕ್ಷರಿಗೆ ಕೊಟ್ಟು ತಾಲ್ಲೂಕು ಅಧ್ಯಕ್ಷರಿಗೂ ನೀವು ಕೆಲವಾರು ಅಧಿಕಾರಗಳನ್ನು ಕೊಟ್ಟು ವಿಲೇಜ್ ಪಂಚಾಯಿತಿಯಲ್ಲಿ ಒಬ್ಬನೇ ಒಬ್ಬ ಸೆಕ್ರೆಟರಿ ಮತ್ತು ಅವನ ಕೈಕೆಳಗೆ ಕೆಲಸ ಮಾಡತಕ್ಕ ಒಬ್ಬ ಜವಾನ ಮತ್ತು ಒಬ್ಬ ಸೆಕ್ರೆಟರಿ ಮತ್ತು ಅವನ ಕೈಕೆಳಗೆ ಕೆಲಸ ಮಾಡತಕ್ಕ ಒಬ್ಬ ಜವಾನ ಮತ್ತು ಒಬ್ಬ ಸೆಕ್ರೆಟರಿ ಮತ್ತು ಅವನ ಕೈಕೆಳಗೆ ಕೆಲಸ ಮಾಡತಕ್ಕ ಒಬ್ಬ ಜವಾನ ಮತ್ತು ಒಬ್ಬ ಕ್ಲೀನರ್ ಇವರುಗಳ ಮೇಲ್ವಿಚಾರಣೆ ನೋಡಿ ಕೊಳ್ಳುವುದಕ್ಕೆ ಅವನಿಗೆ ಶಕ್ತಿ ಇರುವುದಿಲ್ಲವೆ? You are undermining the strength of the Chairman of the Village Panchayat. ಅದಕ್ಕೋಸ್ಕರ ದಯವಿಟ್ಟು ಅವರ ಸ್ಟಾಫ್ ಮೇಲ್ವಿಚಾರಣೆ ಯಾವರೀತಿ ನೋಡಿಕೊಳ್ಳುತ್ತಾರೋ ಅದೇ ತರಹ ಇವರಿಗೂ ಅಧಿಕಾರ ಕೊಟ್ಟರೆ ಕಲಿಯುತ್ತಾರೆ. ಇನ್ನು ಮುಂದಿನದು ಸ್ವಾಮಿ ತಮ್ಮಲ್ಲಿ ಕೇಳುತ್ತಿದ್ದೇನೆ, ಅಧಿಕಾರ ಕೊಡುವುದು ಎಂದು ತಾವು ಹೇಳಿದಿರಿ. ತಮ್ಮ ಭಾಷಣದಲ್ಲಿ ತಾವು ಹೇಳುತ್ತೀರಿ ಅಂದುಕೊಂಡಿದ್ದೆ. ಇವರಿಗೆ ಇರತಕ್ಕ ಅಧಿಕಾರ ಏನು? ಮೇಲ್ವಿಚಾರಣೆ. Whether action could be taken against officials? I want a clarificaiton. Whether he can effect transfer? Whether he can write the confidential report of officials? Whether he can appoint his own staff? Whether he is the controlling authority of the Government servants who are working within his jurisdiction? ಇವರಲ್ಲಿ ನೋಡಿದರೆ ನನಗೆ ಕಾಣಿಸಲಿಲ್ಲ. ರೂಲ್ಸನಲ್ಲೇನಾದರೂ ಅಳವಡಿಸಿದ್ದೀರೋ ಏನೋ ನನಗೆ ಗೊತ್ತಿಲ್ಲ. ಅಳವಡಿಸಿದ್ದರೆ ಬಹಳ ಸಂತೋಷ. ಅಳವಡಿಸಿದಿದ್ದರೆ ಯಾವ ತರಹ ಪವರ್ಸ್ ಎಂಬುದನ್ನು ತಾವು ಸ್ಪಷ್ಟೀಕರಣಕೊಟ್ಟರೆ ಸರಿ ಹೋಗುತ್ತದೆ. ಸ್ವಾಮಿ, ನನ್ನ ಕ್ಷೇತ್ರದಲ್ಲಿ, ಆನೇಕಲನಲ್ಲಿ ಅವರೆಲ್ಲಾ ಮಹಿಳೆಗೆ ರಿಸರ್ವ್ ಮಾಡಿಬಿಟ್ಟಿದ್ದೀರಿ. ನಮ್ಮ ಆನೇಕಲ್ ಅಂದತಕ್ಷಣ ಅದು ಯಾರಿಗೂ ಬೇಕಾಗಿಲ್ಲ. ಯಾರು ಬೇಕಾದರೂ ಏನಾದರೂ ಮಾಡಿಕೊಳ್ಳಬಹುದು. ನಾನು ನಿಮ್ಮ ಜೊತೆಯಲ್ಲಿ ಭಾಷಣ ಮಾಡಿಕೊಂಡು ಕುಳಿತಿದ್ದೆನಲ್ಲ ಒಬ್ಬ ಲೇಡಿಯನ್ನು ಅಲ್ಲಿ ಹಾಕಿದ್ದೀರಿ. ಅದರ ಬಗ್ಗೆ ಹೇಳಿದರೆ ಒಂದು ಗಂಟೆಯಾಗುತ್ತದೆ. ಅದನ್ನು ಇನ್ನೊಂದು ಸಾರಿ ಹೇಳುತ್ತೇನೆ. ಅಲ್ಲಿ ಸ್ವಾಮಿ, ಒಂದು ವರ್ಷ ಆಯಿತಲ್ಲ, ಕಾಯ್ದುಕೊಂಡಿದ್ದು. ಪಕ್ಕಯಿಂದ ಬಸ್ ಹತ್ತಿಕೊಂಡು ಬರುತ್ತಾಳೆ ಅವರು ನನಗೇ ಹೇಳುತ್ತಾರೆ; ನೋಡಿ ಸ್ವಾಮಿ ಈಗ 8 ಗಂಟೆ ಆಗುತ್ತದೆ ನಾನು ಮನೆ ಸೇರುವಷ್ಟೊತ್ತಿಗೆ. ಅಲ್ಲಿ ಕುಳಿತಿರುತ್ತೇನೆ ಏನೂ ಕೆಲಸ ಇಲ್ಲ. ಮಧ್ಯಾಹ್ನ ಅಷ್ಟೇ ಊಟಾನೂ ಕಾಫೀನೋ ತರಿಸಿಕೊಂಡು ತಿಂದು ನಮ್ಮಲ್ಲಿ ಹಣ ಇಲ್ಲವೆ? ಹಣ ಇಲ್ಲದಿದ್ದರೆ ಬೇಡ. ಕೋಟ್ಯಾಂತರ ರೂಪಾಯಿ ನಮ್ಮಲ್ಲಿದೆ. ಜಿಲ್ಲಾ ಪರಿಷತ್ತಿನಲ್ಲಿ ಬಹಳ ಸೋರ್ಸ್ ಇದೆ. ಒಂದು ಕಾರು ಕೊಡುವುದಕ್ಕೆ ಎಲ್ಲಿ ಕನಸಲ್ಟೇಷನ್? ಯಾರಿಗೆ ಇದೆ ಅಧಿಕಾರ? ನಾನು ಹೇಳಿ ಹೇಳಿ ಸುಸ್ತಾಗಿಹೋಗಿಬಿಟ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪಂಚಾಯಿತಿಗೆ ಕಾರು ಕೊಡಬೇಕೇ?

ಶ್ರೀ ವೈ. ರಾಮಕೃಷ್ಣ : ಅಲ್ಲ, ತಾಲ್ಲೂಕು ಪಂಚಾಯಿತಿಗೆ. ಇವರು ಅಧಿಕಾರ ಕೊಡುತ್ತಾ ಇದ್ದಾರೆ. ಯಾವರೀತಿ ಅಧಿಕಾರ ಚಲಾಯಿಸುವುದು? ಸೂಪರ್‌ಸೀಡ್ ಮಾಡಬೇಕಲ್ಲ? ಕೆಲಸಗಳನ್ನೆಲ್ಲಾ

ಸೂಪರ್‌ವಿಷನ್ ಮಾಡಬೇಕು. ಹಣ ಕೊಟ್ಟಿದ್ದೀರಿ. ಸ್ವಾಮಿ. ಹಿಂದಿನ ಪಂಚಾಯಿತಿಯಲ್ಲಿ ತಾವು ಹೇಳಿದಹಾಗೆ ರಿಸರ್ವೇಷನ್ ಇರಲಿಲ್ಲ. ಹಣ ಇರಲಿಲ್ಲ. ಅಧಿಕಾರ ಇರಲಿಲ್ಲ. ಇವತ್ತು ನೀವು 73 ಮತ್ತು 74ಕ್ಕೆ ತಿದ್ದುಪಡಿ ತಂದು, ಈ ಒಂದು ತಿದ್ದುಪಡಿ ಕಾನೂನಿನೊಳಗೆ ರಿಸರ್ವೇಷನ್ ಕೊಟ್ಟಿದ್ದೀರಿ. ನಾನು ಹೇಳತಕ್ಕದ್ದು ತಮಗೆ ನೀವು ಪವರ್ಸ್ ಕೊಡದಿದ್ದರೆ ಸೂಪರ್‌ವಿಷನ್ ಹೇಗೆ ಮಾಡುತ್ತಾರೆ ಅವರು? ಕೋಟ್ಯಾಂತರ ರೂಪಾಯಿ ನೀವು ಕೊಟ್ಟು ಸೂಪರ್‌ವೈಸ್ ಮಾಡು ಅಂದರೆ ಹೇಗೆ ಮಾಡುತ್ತಾರೆ? ಬಸ್ಸಿನಲ್ಲಿ ಕುಳಿತುಕೊಂಡು ಹೋಗಿ ಮಾಡುವುದಕ್ಕಾಗುತ್ತದೆಯೇ? ಅದಕ್ಕೋಸ್ಕರವಾಗಿ ಈ ಎಲ್ಲಾ ವಿಚಾರಗಳನ್ನು ತಾವು ಪರಿಶೀಲಿಸಿ. ನನ್ನದೊಂದು ವಿಷಯ ಇದೆ ಸ್ವಾಮಿ. ಅದೇನೆಂದರೆ ಗ್ರಾಮಪಂಚಾಯಿತಿ ಮತ್ತು ಗ್ರಾಮಸಭೆಗಳ ವಿಚಾರದಲ್ಲಿ ನನ್ನ ಚಿಂತಾಮಣಿಯಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತು. ಈ ಸಭೆಯ ಮಾಜಿ ಸದಸ್ಯರು ಮಾಜಿ ಮಂತ್ರಿಗಳೊಬ್ಬರನು ಅರೆಸ್ಟ್ ಮಾಡಿದ್ದೀರಿ. ಅದು ಸರಿಯೋ ತಪ್ಪೋ ಅದರ ಮೆರಿಟ್ಸ್‌ಗೆ ಹೋಗುವುದಿಲ್ಲ. ಫಲಾನುಭವಿಗಳನ್ನು ಗುರುತಿಸುವವರು ಯಾರು? ನಿಮ್ಮ ಆಕ್ಟಿನಲ್ಲಿ ಯಾರು ಅಂತ ಹೇಳುತ್ತೀರಿ? ಗ್ರಾಮಪಂಚಾಯಿತಿಯೇ ಅಥವಾ ಗ್ರಾಮಸಭೆಯೇ? ತಾವು ಹೇಳಿದಿರಿ ಗ್ರಾಮಸಭೆ ಅಂತ ಇಟ್ಟುಕೊಳ್ಳುತ್ತೇನೆ. ಗ್ರಾಮಸಭೆಯಲ್ಲಿ ಯಾರನ್ನು ಅವರು ಐಡೆಂಟಿಫೈ ಮಾಡುತ್ತಾರೆ ಅವನ್ನು ಗ್ರಾಮಪಂಚಾಯಿತಿಯವರು ಒಪ್ಪುವುದಿಲ್ಲ. ಆಗ ಏನು ಪ್ರೊಸೀಜರ್ ಫಾಲೋ ಮಾಡಬೇಕು ದಯವಿಟ್ಟು ನನಗೆ ಹೇಳಿ. ಗ್ರಾಮಪಂಚಾಯಿತಿ ಅನುಮೋದಿಸುವುದಿಲ್ಲ.

ಒಂದು ಊರಿನಲ್ಲಿ 20 ಬಡವರಿದ್ದಾರೆ. 20 ಗುಡಿಸಲಿದೆ. ಗ್ರಾಮಸಭೆ ಸೇರುತ್ತದೆ. 20 ಜನರಿಗೂ ಕೊಡಬೇಕು ಅಂತ ಅವರು ಹೇಳುತ್ತಾರೆ. ಆಗ ನೀವು ಕೊಟ್ಟಿರುವುದು ಎರಡು ಮನೆ. ಆ ಎರಡು ಮನೆಯನ್ನು ಗ್ರಾಮಪಂಚಾಯಿತಿಯವರು ಗ್ರಾಮಸಭೆಯವರು ಹೇಳಿದಹಾಗೆ ಕೇಳುವುದಿಲ್ಲ. ಆಗ ಏನು ಪ್ರೊಸೀಜರ್ ತಾವು ಅಡಾಪ್ಟ್ ಮಾಡುತ್ತೀರಿ? ಇವತ್ತು ನಡೆದಿರುವುದು ಹೇಳುತ್ತೇನೆ. ಒಂದು ವೇಳೆ ಗ್ರಾಮಸಭೆ ಹೇಳಿದಹಾಗೆ ಕೇಳದಿದ್ದರೆ ಗ್ರಾಮಪಂಚಾಯಿತಿ ಅಧ್ಯಕ್ಷನಾಗಿ ನಾನು ಹೇಳುತ್ತೇನೆ I am not going to issue licences for the construction of houses whether it is Ambedkar scheme or Ashraya scheme. ನಿಮ್ಮ ಆಶ್ರಯ ಯೋಜನೆ ಇರಬಹುದು, ಯಾವುದೇ ಯೋಜನೆ ಇರಬಹುದು ನಾನು ಲೈಸೆನ್ಸ್ ಇಷ್ಯೂ ಮಾಡುವುದಿಲ್ಲ. ನಾನು ಲೈಸೆನ್ಸ್ ಕೊಡುವುದಿಲ್ಲ. ನಿಮಗೆ ಎಲೆಕ್ಟ್ರಿಸಿಟಿ ಹೇಗೆ ಬರುತ್ತದೆ? ಬೇರೆ ವಿಚಾರಗಳು ಹೇಗೆ ಬರುತ್ತದೆ? ಅದಕ್ಕೋಸ್ಕರ ಫಲಾನುಭವಿಗಳನ್ನು ಗುರುತಿಸತಕ್ಕ ಹೊಣೆಗಾರಿಕೆ, ಜವಾಬ್ದಾರಿಯನ್ನು ನಿರ್ದಿಷ್ಟವಾಗಿ ಯಾರಿಗೆ ಕೊಡಬೇಕು, ಒಂದು ವೇಳೆ ಅಲ್ಲೇನಾದರೂ ಗೊಂದಲ ಆದರೆ ಯಾರು ಮಾಡಬೇಕು?

4.40 ಪಿ.ಎಂ.

ಏಕೆಂದರೆ ನಿರ್ದಿಷ್ಟವಾದ ಡೈರೆಕ್ಷನ್ ಇದರಲ್ಲಿ ಇಲ್ಲ. ಅದಕ್ಕೋಸ್ಕರ ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ನಾನು ಬೇಡಿಕೊಳ್ಳುತ್ತೇನೆ. Define their powers. Please define their powers. ಫೈನ್ ಮಾಡದಿದ್ದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ನನ್ನದು ಒಂದು ಸಣ್ಣ ಅಮೆಂಡಮೆಂಟ್. ಸೂಕ್ತವಾದರೆ ಇವತ್ತು ಇದರಲ್ಲಿ ತಾವು ತೆಗೆದುಕೊಂಡು ಬನ್ನಿ. Select the poorest of the poor

ಗ್ರಾಮಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಅಥವಾ ಗ್ರಾಮಸಭೆ ಇರಬಹುದು. What is the parameter to select the beneficiary ನೀವು ಆ ಪ್ಯಾರಾಮೀಟರ್‌ನ್ನು ಹಾಕಿಕೊಡಬೇಕಲ್ಲ ಅವರಿಗೆ. ಅದಕ್ಕೆ ನಾನು ತಮ್ಮಹತ್ತಿರ ಹೇಳುತ್ತಿದ್ದೇನೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಯಾರು ಬಡವರಾಗಿದ್ದಾರೋ, ಬಡವರಲ್ಲಿ ಬಡವರಾಗಿದ್ದಾರೋ ಅವರಿಗೆ ಆದ್ಯತೆ ಕೊಡತಕ್ಕದ್ದು. ಹಾಗೆ ಮಾಡಿದರ ಇಲ್ಲಿ ಟೋಕನ್ ಆಗಿ ಇರತಕ್ಕ ಅಧಿಕಾರಿಗಳು ಮತ್ತು ಮೆಂಬರ್ಸ್ ನಿಜವಾದ ಫಲಾನುಭವಿಗಳನ್ನು ಹುಡುಕುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆಗ ಅಮೆಂಡ್‌ಮೆಂಟಿನ ಅವಶ್ಯಕತೆ ಇಲ್ಲ. ನಿನ್ನೆ ದಿವಸ ಮಾಜಿ ಮಂತ್ರಿಗಳೊಬ್ಬರ ಅರೆಸ್ಟ್ ಆಯಿತಲ್ಲ ಅದಕ್ಕೆ ಹೇಳಿದ. ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ ಅಪೂರ್ಣವಾದಂತಹ ಮಸೂದೆಯನ್ನು ತರುವ ಬದಲು ನೀವು ಪಾಸ್ ಮಾಡಿಕೊಳ್ಳಿ ನಾನು ಬೇಡ ಎನ್ನುವುದಿಲ್ಲ.

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಬಡವರಲ್ಲಿ ಅಂದರೆ ಒಂದು ಊರಿನಲ್ಲಿ 10 ಗುಡಿಸಲುಗಳು ಇರುತ್ತವೆ. ಅವರಲ್ಲಿ ಇಬ್ಬರಿಗೆ ಕೊಡಬೇಕು ಅದನ್ನು ಹೇಗೆ ಕೊಡಬೇಕೆನ್ನುವುದನ್ನು ಹೇಳಿಬಿಟ್ಟರೆ ಚೆನ್ನಾಗಿರುತ್ತದೆ.

ಶ್ರೀ ವೈ. ರಾಮಕೃಷ್ಣ : ಬಡವರಲ್ಲಿ ಬಡವರು. ಒಂದ ಏನಿತ್ತು? The poorest of the poor should get the benefit. And he alone should be the beneficiary.

ಶ್ರೀ ಎಸ್. ಕೃಷ್ಣಪ್ಪ : ಒಂದು ನಿಮಿಷ. ಅದನ್ನು ಕೂಡ ಅಮೆಂಡಮೆಂಟಿನಲ್ಲಿ ತರಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ : ನಾವು ಕೈಹಾಕುವಹಾಗೆ ಇಲ್ಲ. ಡಿಸ್ಟ್ರಿಕ್ಟ್ ಮೆಂಬರ್ ಕೈಹಾಕುವ ಹಾಗೆ ಇಲ್ಲ. ಪಂಚಾಯಿತಿಯ ಮೆಂಬರ್ ಕೈಹಾಕುವಹಾಗೆ ಇಲ್ಲ. ಗ್ರಾಮಪಂಚಾಯಿತಿಯವರು ಕೈಹಾಕುವಹಾಗೆ ಇಲ್ಲ. ಮತ್ತೆ ಯಾರು? ಗ್ರಾಮಸಭೆಯವರು ಹಾಕಬೇಕು. ನಾನು ತಮ್ಮನ್ನು ಬೇಧವಾಗಿ ಈ ಪ್ರಶ್ನೆಯನ್ನು ಕೇಳುತ್ತೇನೆ. ಎಷ್ಟೆಷ್ಟು ಗ್ರಾಮಪಂಚಾಯಿತಿಗಳು ಸಭೆ ಸೇರುತ್ತೇವೆ? ಹೇಳಿ ಸ್ವಾಮಿ ನೋಡೋಣ. ತಮ್ಮ ಗಮನಕ್ಕೆ ಬಂದಿದೆಯೋ ಸಭೆ ಸೇರಿವೆ ಎಂದು ಹೇಳಿ. ತಾವು ಸರ್ಕ್ಯೂಲರ್ ಕೊಟ್ಟಿದ್ದೀರಿ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ನಾನು ತಂದಿರತಕ್ಕ ತಿದ್ದುಪಡಿ ಅಧ್ಯಾದೇಶವನ್ನು ಬದಲಿಸಿ ಆ ತಿದ್ದುಪಡಿ 152, 156, 193 ಇಷ್ಟೊಂದು ವಿಚಾರದಲ್ಲಿ ನಾವು ಕಳುಹಿಸಿದ್ದೇವೆ. ಸಮಗ್ರವಾಗಿರತಕ್ಕ ತಿದ್ದುಪಡಿಯನ್ನು ತಾವು ಹೇಳಿದಂತೆ ಅನೇಕ ನ್ಯೂನತೆಗಳ ನಡುವೆ ಇರತಕ್ಕದ್ದು ಅದರ ಬಗ್ಗೆ ಸಮಗ್ರವಾದ ಚರ್ಚೆಯಾಗುವುದಾದರೆ ಆಗಲಿ. ಆದರೂ ಕೂಡ ತಾವು ಏನೇನು ಪ್ರಶ್ನೆಗಳನ್ನು ಎತ್ತಿದ್ದೀರಿ ಹೇಳುತ್ತೇನೆ. ಅದರ ಇದನ್ನು ಬಹಳ ಉಂಘಿಸಬಾರದೆಂದು ಹೇಳುತ್ತೇನೆ. ಇಷ್ಟಕ್ಕೆ ಸೀಮಿತ ಗೊಳಿಸಿದರೆ ಅದು ಒಳ್ಳೆಯದು.

ಶ್ರೀ ವೈ. ರಾಮಕೃಷ್ಣ : ಸೀಮಿತಗೊಳಿಸಿದ್ದೇನೆ ಅದಕ್ಕೆ ನಾನು ಹೇಳಿದ್ದು. ಮೂರನೆಯ ಅಮೆಂಡಮೆಂಟ್ ಏನೆಂದರೆ ಈಗ They alone ಆಲೋನ್ ಎನ್ನುವ ಪದ ಅಲ್ಲಿ ಏಕೆ ಬಂತು? The

alone should be the members of the Local Body ಮೆಂಬರ್ಸ್ ತಾವು ಏನು ಹೇಳಿದ್ದೀರಿ, †To amend Section 159. the State Legislative Council who are registered as electors within the area of jurisdiction of Zilla Panchayat shall alone be the members ಅಲೋನ್ ಬೇಕಾಗಿಲ್ಲ, ಕಾನೂನು ಉಲ್ಲಂಘನೆ ಮಾಡುತ್ತಾರೇನು? ದಯವಿಟ್ಟು ನೋಡಿ, ಬೇಕು ಅಂದರೆ ಇಟ್ಟುಕೊಳ್ಳಿ ಇಲ್ಲವೆಂದರೆ ತೆಗೆದು ಬಿಸಾಕಿ. ನನಗೆ ತಿಳಿದದ್ದು ನಾನು ಹೇಳಿದ್ದೇನೆ. ಮತ್ತೊಂದು ವಿಚಾರವನ್ನು ತಮ್ಮ ಪರಿಗಣನೆಗೆ ತರಬೇಕೆಂದು ಇದ್ದೇನೆ. ಅದೇನೆಂದರೆ, ಎಂ. ಎಲ್.ಎಗಳಿಗೆ ಅಷ್ಟೊಂದು ಡಿಸ್ಟ್ರಿಕ್ಟ್‌ನಲ್ಲಿ ಹಕ್ಕಿಲ್ಲವೆಂದು ಹೇಳಿದ್ದೀರಿ. ಓಟು ಮಾಡತಕ್ಕ ಹಕ್ಕು ನಮಗಿಲ್ಲ. ಅದು ಗ್ರಾಮಪಂಚಾಯಿತಿ ಇರಬಹುದು, ಮುನಿಸಿಪಾಲಿಟಿ ಇರಬಹುದು, ಅಥವಾ ತಾಲ್ಲೂಕು ಪಂಚಾಯಿತಿ ಇರಬಹುದು, ಅಲ್ಲಿ ವಾಸವಿದ್ದರೆ ಮಾತ್ರ ಓಟು ಮಾಡುವ ಪವರ್ ಇದೆ. ನಾನು ಅದನ್ನೇ ಹೇಳುತ್ತಿದ್ದೇನೆ, ಬೇರೆ ಕಡೆ ಆಕ್ಟ್‌ನಲ್ಲಿ ಏನೇನು ಇದೆಯೆನ್ನುವುದನ್ನು ತಾವು ಸ್ಟಡಿ ಮಾಡಿದ್ದೀರಾ? I have honestly disclosed that I have not. ಬೇರೆ ಕಡೆ ಎಲೆಕ್ಷನ್‌ನಲ್ಲಿ ನಾವು ಗೆದ್ದರೆ ಸಾಕು. ನಾವು ವಾಸ ಎಲ್ಲಿಯಾದರೂ ಇರುತ್ತೇನೆ. ನಾವು ಅವರಿಂದ ಓಟು ತೆಗೆದುಕೊಂಡಿದ್ದೇವೆ. ಅವರನ್ನು ನಾವು ಪ್ರತಿನಿಧಿಸುತ್ತೇವೆ. ಅವರ ಕಷ್ಟಸುಖಗಳಲ್ಲಿ ನಾವು ಭಾಗಿಯಾಗಬೇಕು. ಅಂದಮೇಲೆ ನಮಗೆ ಏಕೆ ಆ ಓಟಿನ ಪವರ್ ಇಲ್ಲ? ಅದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಸಾಧ್ಯವಿದ್ದರೆ ಮಾಡಿ ಇಲ್ಲದಿದ್ದರೆ ಇನ್ನೇನು ಎಂ.ಎಲ್.ಎ.ಗಳು ಮುಂದಿನ ಸಾರಿ ಯಾರೂ ಗೆದ್ದು ಬರುವುದಿಲ್ಲ. ಒಬ್ಬರೂ ಗೆದ್ದು ಬರುವುದಿಲ್ಲ ನೀವು ತಂದಿರುವ ಆಕ್ಟ್ ನಿಮ್ಮ ನಡವಳಿಕೆ ಇದನ್ನೆಲ್ಲ ನೋಡಿದಾಗ, ಎಂಎಲ್ ಎಗಳು ಇವತ್ತ ಏನಾಗಿದ್ದಾರೆ ಗೊತ್ತೇ? ಕರ್ತವ್ಯವೆಂದು ಹಾಕುತ್ತೀರಿ, ತಾಲ್ಲೂಕು ಪಂಚಾಯಿತಿ ಮೆಂಬರ್ಸ್‌ಗಳಿಗೂ ಹಾಕುತ್ತೀರಿ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ಸ್‌ಗೆ ಹಾಕುತ್ತೀರಿ, ನಮಗೇನು ಕೆಲಸಗಳು? ಅರಳೀಮರದ ಕೆಳಗೆ ಕುಳಿತು ಮತ್ತೆ ನಾವು ಹೇಳಿದಿರಿ, ತಾಲ್ಲೂಕು ಆಫೀಸಿನಲ್ಲಿ ಒಂದು ಆಫೀಸು ಇರುತ್ತದೆಂದು ಹೇಳಿದಿರಿ. ನಮ್ಮ ಕ್ಷೇತ್ರದಲ್ಲಿ ದೊಡ್ಡ ಜಾತ್ರೆ ನಡೆಯುತ್ತಿದೆ. 60 ಮೀಟರ್ ಟಾರ್ ಹಾಕಿಸಬೇಕಾಗಿತ್ತು ದೇವರ ರಥ ಹೋಗುವುದಕ್ಕೆ. 6 ದಿವಸಗಳಿಂದ ಸಾಕಾಗಿತ್ತು. ಇವತ್ತು ನಾನು ಎಷ್ಟು ನಿರಾಶೆಯಾಗಿದ್ದೇನೆಂದರೆ, ಹೇಳತೀರದು. ಆ ಮಟ್ಟಕ್ಕೆ ಎಂ. ಎಲ್.ಎಗಳನ್ನು ಇಳಿಸಿದ್ದೀರಿ. ಅದಕ್ಕೋಸ್ಕರವೇ ಎಂ. ಎಲ್.ಎಗಳ ಹಕ್ಕುಬಾಧ್ಯತೆಯ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು. ಅವರು ಏನೇನು ಹಕ್ಕು ಚಲಾಯಿಸಬಹುದು, ಇವುಗಳ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು. ಎಲೆಕ್ಟೆಡ್ ರೆಪ್ರಸೆಂಟೇಟೀವ್ಸ್ ಅವರ ಕರ್ತವ್ಯಗಳೇನು? ಇವುಗಳ ಬಗ್ಗೆ ಇಲ್ಲಿ ಚರ್ಚೆಯಾದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ತಂದಿರತಕ್ಕ ತಿದ್ದುಪಡಿ It is a step. I don't deny it. ಇದು ಮೊದಲನೆಯ ಸ್ಟೆಪ್ ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಛೇರ್ಮನ್‌ಗಳಿಗೆ ಕೊಡತಕ್ಕ ಎಕ್ಸಿಕ್ಯುಟಿವ್ ಪವರ್ಸ್ I definitely welcome. Thank you.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಇಷ್ಟೊಂದು ತಿದ್ದುಪಡಿಯ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ಕೇವಲ ಸೆಕ್ಷನ್

152,156,159,193 ಮತ್ತು 197 ಈ ಐದು ಅಮೆಂಡ್‌ಮೆಂಟ್ ಏನಿವೆ ಅದರಲ್ಲಿ consequential amendment ಏಕೆಂದರೆ ಎಲ್ಲೆಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಎಕ್ಸಿಕ್ಯುಟಿವ್ ಆಫೀಸರ್‌ಗೆ ಅಧಿಕಾರವಿತ್ತು ಅಲ್ಲೆಲ್ಲಾ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರಿಗೆ ಎಲ್ಲೆಲ್ಲಿ ಚೀಫ್ ಸೆಕ್ರೆಟರಿ ಜಿಲ್ಲಾಪಂಚಾಯಿತಿ ಅಲ್ಲಿ ಜಿಲ್ಲಾಪಂಚಾಯಿತಿ ಅಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟಂತಹ ಈ ತಿದ್ದುಪಡಿ. ಆದರೂ

(ಸಭಾಧ್ಯಕ್ಷರು ಪೀಠದಲ್ಲಿದ್ದರು)

ಇದರ ಜೊತೆಯಲ್ಲಿ ಒಂದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು, ಅಧಿಕಾರ ಕೊಡತಕ್ಕದ್ದು ಯೋಗ್ಯ. ಅದು ತಾಲ್ಲೂಕುಮಟ್ಟದಲ್ಲಿರಲಿ, ಜಿಲ್ಲಾಮಟ್ಟದಲ್ಲಿರಲಿ ಈಗಾಗಲೇ ಮಾನ್ಯ ವೈ. ರಾಮಕೃಷ್ಣರವರು ಹೇಳಿದಹಾಗೆ, ಗ್ರಾಮಪಂಚಾಯಿತಿಯಲ್ಲಿಯೂ ಅದೇ ರೀತಿಯಾಗಿ ಮಾಡಬಹುದಾಗಿತ್ತು. ಅದು ಏಕೆ ಆಗಲಿಲ್ಲ? ಅದಕ್ಕೂ ತಿದ್ದುಪಡಿಯನ್ನು ತರಬಹುದಾಗಿತ್ತು. ಇಷ್ಟೆಲ್ಲ ಅಧಿಕಾರಗಳನ್ನು ನಾವು ಕೊಟ್ಟಿದ್ದೇವೆ. ಕೊಟ್ಟರು ಕೂಡ ತಾಲ್ಲೂಕಾಮಟ್ಟದಲ್ಲಿ ಮಿಸ್‌ಯೂಸ್ ಆದಾಗ ಅಥವಾ ಅಲ್ಲಿ ಏನು ಕಾನೂನು ವಿರುದ್ಧವಾಗಿ ನಡೆದುಕೊಂಡಾಗ, ಯಾವರೀತಿಯಾಗಿ ಸರ್ಕಾರದವರು ನಿಯಂತ್ರಣದಲ್ಲಿಟ್ಟು ಕೊಳ್ಳುತ್ತಾರೆ? ಇದು ಬಹಳ ಮುಖ್ಯ. ಏಕೆಂದರೆ ಇವತ್ತು ನಾವು ನೋಡುತ್ತಿದ್ದೇವೆ. ಅನೇಕ ಸಾರಿ ಕಾನೂನಿನ ವಿರುದ್ಧವಾಗಿ ನಡೆದುಕೊಂಡು ಹೋಗತಕ್ಕ ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾಪಂಚಾಯಿತಿಗಳು ಅವರು ಮಾಡತಕ್ಕ ಕಾರ್ಯ ವೈಖರಿಯ ಬಗ್ಗೆ ಮತ್ತು ಅಲ್ಲಿ ನಡೆದಂತಹ ಏನು ಲಂಚದ ಹಾವಳಿ ಅಥವಾ ಕೆಲಸ ತಮಗೆ ಬೇಕಾದವರಿಗೆ ಕೊಡತಕ್ಕದ್ದು. ಕೆಲಸ ಮಾಡದೆ ಎಂ.ಬಿಗಳನ್ನು ಬರೆಸಿಕೊಂಡು ಬಿಲಗಳನ್ನು ಎತ್ತಿಕೊಳ್ಳುವುದು. ಫೆಬ್ರವರಿ ಮಾರ್ಚಿಯಂತು ಅವರಿಗೆ ಸುಗ್ಗಿ, ನಮ್ಮ ಕಡೆ ಸುಗ್ಗಿಯೆಂದು ಹೇಳುತ್ತೇವೆ. ಇದೊಂದು ಸುಗ್ಗಿ ಸೀಸನ್. ಮತ್ತು ನಮ್ಮ ಪ್ರಾಮಾಣಿಕ ಅನಿಸಿಕೆ ಏನೆಂದರೆ ಗ್ರಾಮ ಪಂಚಾಯಿತಿ, ತಾಲ್ಲೂಕುಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿಗಳಿಗೆ ಅಧಿಕಾರವನ್ನು ನಾವು ವಿಕೇಂದ್ರಿಕರಣ ಮಾಡಿಕೊಟ್ಟರೆ, ಹೆಚ್ಚಾಗಿ ಅಭಿವೃದ್ಧಿಯಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ನಾವು ಕೊಟ್ಟಿದ್ದೇನೆ. ನಾವೆಲ್ಲರೂ ಕೂಡ ಅದನ್ನು ಅರ್ಥಮಾಡಿಕೊಂಡು ಇವತ್ತು ಅವರಿಗೆ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಆದರೆ ಮಾನ್ಯಅಧ್ಯಕ್ಷರೇ ತಮ್ಮ ಗಮನಕ್ಕೂ ಕೂಡ ಬಂದಿರಬಹುದು ನಾನೂ ಕೂಡ ಮಾನ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಒಂದೊಂದು ಜಿಲ್ಲಾಪಂಚಾಯಿತಿಯಲ್ಲಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಸರ್ಕಾರದ ವತಿಯಿಂದ ಹೋದಂತಹ ಹಣದಲ್ಲಿ 30 ಪರ್ಸೆಂಟ್ ಹಣವೂ ಕೂಡ ಕೆಲವು ಕಡೆ ಖರ್ಚಾಗಿಲ್ಲ. ಆ 30 ಪರ್ಸೆಂಟ್ ಹಣದಲ್ಲಿಯೂ ಕೂಡ ಯೋಗ್ಯವಾದ ಹಣಕ್ಕೆ ತಕ್ಕಂತೆ ಕೆಲಸವೂ ಕೂಡ ಆಗಿಲ್ಲ. ಫೈನಾನ್ಶಿಯಲ್ ಟಾರ್ಗೆಟ್ ಮತ್ತು ಫಿಜಿಕಲ್ ಟಾರ್ಗೆಟ್ ಏನು ಇರುತ್ತದೆ ಎರಡಕ್ಕೂ ಹೋಲಿಸಿ ನೋಡಿದಾಗ, ನಿಮ್ಮ ಮದ್ದೇ ಒಂದು ಕಡೆ ಕೆಲಸವೇ ಒಂದು ಕಡೆ. ಟ್ರಾಕ್ಟರ್ ಹಚ್ಚಿ ಮಣ್ಣು ಹಾಕಿ ಬಿಲ್ ತೆಗೆದುಕೊಳ್ಳತಕ್ಕ ಜನ ಇವತ್ತು ಸಾಕಷ್ಟು ಜಿಲ್ಲಾಪಂಚಾಯಿತಿಯಲ್ಲಿ ಮತ್ತು ತಾಲ್ಲೂಕು ಪಂಚಾಯಿತಿನಲ್ಲಿ ಬಂದಿದ್ದಾರೆ. ಮರ್ದ್ಯವದಿಂದ ಪೀಪಲ್ ರೆಪ್ರಸೆಂಟಟೀವ್ ಆಕ್ಟ ಪ್ರಕಾರ ನಮಗೇನು ಅಧಿಕಾರವಿದೆ ಅಂದರೆ ಕಾನೂನು ಮಾಡತಕ್ಕ ಅಧಿಕಾರ, ಪಾಲಿಸಿ ಮ್ಯಾಟರ್ಸ್ ನೋಡಿಕೊಳ್ಳತಕ್ಕದ್ದು ಇದು ಸರಿ. ಅಲ್ಲಿ ಪಾರ್ಟಿ ಪಾಲಿಟಿಕ್ಸ್ ಬರುತ್ತದೆ. ಒಂದು ಸ್ಮಾಲ್ ಬಿಲ್ಡಿಂಗ್

ಕೇಳಿದರೆ ಪಾರ್ಟಿ ಪಾಲಿಟಿಕ್ಸ್. ಒಂದು ರಸ್ತೆ ಕೇಳಿದರೂ ಪಾರ್ಟಿ ಪಾಲಿಟಿಕ್ಸ್. ಹೀಗೆ ಇರುವಾಗ, ಯಾವರೀತಿಯಿಂದ ನೀವು ಅವರಿಗೆ ಹತೋಟಿಯಲ್ಲಿಟ್ಟುಕೊಳ್ಳುತ್ತೀರಿ? ಅದಕ್ಕೆ ನೀವೇನು ಮಾಡಿದ್ದೀರಿ? ಅಧಿಕಾರ ಕೊಡುವುದಕ್ಕೆ ಯಾರಾದರೂ ವಿರೋಧವಿಲ್ಲ. ಮತ್ತು ಇದಕ್ಕೆ ಅಕೌಂಟಬಿಲಿಟಿ. ಹಿಂದೆ ಏನಾಗಿತ್ತು ಅಂದರೆ, ಹಿಂದೆ ಗುಲ್ಬರ್ಗಾ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಒಬ್ಬರು ಅಧ್ಯಕ್ಷರ ಇನ್‌ಸ್ಟ್ರಕ್ಷನ್ ಮೇಲೆ ಸದಸ್ಯರ ಇನ್‌ಸ್ಟ್ರಕ್ಷನ್ ಮೇಲೆ ಅಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಯಿತು.

ಆವಾಗ ನಾವು ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಲ್ಲಾ ಆದಮೇಲೆ ಕೊನೆಗೆ ಯಾರು ಅಧ್ಯಕ್ಷರು ಇರುತ್ತಾರೆ, ಅವರನ್ನಂತೂ ಹಿಡಿಯುವುದಕ್ಕೆ ಆಗುವುದಿಲ್ಲ. ನಾನ್ ಅಫಿಶಿಯಲ್. ಕೊನೆಗೆ ಯಾರನ್ನು ಹಿಡಿದರು ಎಂದರೆ ಚೀಫ್ ಸೆಕ್ರೆಟರಿಯನ್ನು. ಆತನು ಹೇಳಿದ್ದೇನಂದರೆ, ಪ್ರತಿಯೊಂದಕ್ಕೂ ನಾನು ಅಧ್ಯಕ್ಷರ ಅಪ್ಪಣೆ ಪಡೆದು, ಮೀಟಿಂಗನಲ್ಲಿ ಇಟ್ಟು ನಾನು ಮಾಡಿಸಿ ಕೊಂಡಿದ್ದೇನೆ, ನನ್ನದೇನೂ ತಪ್ಪಿಲ್ಲ, ಹೀಗೆ ಕೊನೆಗೆ ಈ ಕಡೆ ಚೀಫ್ ಸೆಕ್ರೆಟರಿಗೆ ಕಮಿಟಿಯ ಸದಸ್ಯರು ಕೂಡ ಅಕೌಂಟಬಿಲಿಟಿ ಇಲ್ಲ. ಅದಕ್ಕೋಸ್ಕರ ಇದನ್ನು ಹೇಗೆ ಮಾಡಬೇಕೆಂದು ದೃಷ್ಟಿಯಿಂದ ಯೋಚನೆ ಮಾಡಿದಾಗ, ಕೆಲವು ಅಧಿಕಾರಿಗಳನ್ನು ಯಾವರೀತಿಯಾಗಿ ಮುನಿಸಿಪಾಲಿಟಿಯಲ್ಲಿ ಚೀಫ್ ಆಫೀಸರ್ರು ಇದ್ದಾರೆ ಅಥವಾ ನಮ್ಮ ಕಾರ್ಪೊರೇಷನ್‌ನಲ್ಲಿ ಕಮೀಷನರ್ರು ಇದ್ದಾರೆ. ಆ ರೀತಿಯಾಗಿ, ಅಡ್ಮಿನಿಸ್ಟ್ರೇಟರ್‌ಗೆ ಕೆಲವು ವಿಷಯಗಳನ್ನು ಅವರ ಹತೋಟಿಗೆ ಕೊಟ್ಟು, ಅವರ ಮೇಲೆ ಕಂಟ್ರೋಲ್ ಇಟ್ಟು ನಾಳೆ ಅಕೌಂಟ್‌ಬಿಲಿಟಿ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಆವಾಗ ಶ್ರೀಮಾನ್ ಘೋರ್ಪಡೆಯವರು ಯೋಚನೆ ಮಾಡಿ ಕೆಲವು ಅಧಿಕಾರಗಳನ್ನು ಆ ಸಿ.ಒ.ಗಳಿಗೆ ಕೊಟ್ಟರು. ಈಗ ತಾವು ಅದು ಸರಿಯಲ್ಲ, ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂಥ ಜನ, ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ, ಪಂಚಾಯತ್ ಅಧ್ಯಕ್ಷರಿಗೆ ಕೊಡಬೇಕು ಎಂದಾಗ ಖಂಡಿತವಾಗಿ ಇದರಲ್ಲಿ ಭಿನ್ನಾಭಿಪ್ರಾಯ ಯಾರಿಗೂ ಇಲ್ಲ. ಇದು ಎಲ್ಲರೂ ಒಪ್ಪತಕ್ಕಂಥದ್ದು. ಯಾರಾದರೂ ಸ್ವಲ್ಪಮಟ್ಟಿಗೆ ಮಾತನಾಡಿದರೆ 'ಏನಪ್ಪ ಇವನು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾಗಿ ಇದ್ದಾನೆ ಎನ್ನತಕ್ಕಂಥ ಭಾವನೆ ಬರುತ್ತದೆ. ಆದರೆ ವಾಸ್ತವಿಕವಾಗಿ, ಪ್ರಾಕ್ಟಿಕಲ್ ಆಗಿ ಏನು ಆಗಿದೆ? ಇಲ್ಲಿಯವರೆಗೆ ಹೇಗಿದೆ ಎಂದರೆ ಒಂದೊಂದು ತಾಲ್ಲೂಕು ಪಂಚಾಯಿತಿಯ ಒಬ್ಬೊಬ್ಬ ಜೂನಿಯರ್ ಇಂಜಿನಿಯರ್ ಅಸಿಸ್ಟಂಟ್ ಇಂಜಿನಿಯರ್‌ಗೆ ನಾನು ಹೇಳಿದವನಿಗೆ ಕೆಲಸ ಕೊಡಬೇಕು. ಇದು ಹೋದಮೇಲಂತೂ ಮುಂದೆ ಏನು ಆಗುತ್ತದೆಯೋ ಗೊತ್ತಿಲ್ಲ. ಹೀಗೆ ನಮ್ಮ ಕ್ಷೇತ್ರಗಳಲ್ಲಿ ಇದು ಇದೆ. ಇದರಲ್ಲಿ ಪಾರ್ಟಿ, ಪಂಗಡ ಇಲ್ಲ. ಕಾಂಗ್ರೆಸ್‌ನವರೂ ಹಾಗೆ, ಜನತಾದಳದವರೂ ಹಾಗೆ, ಬಿ.ಜೆ.ಪಿ. ಯವರೂ ಹಾಗೆ ಎಲ್ಲರೂ ಹಾಗೆ, ನಾವು ಹೇಳಿದವರಿಗೆ ಕೊಡಬೇಕು. ನಮ್ಮ ನಮ್ಮ ಮತಕ್ಷೇತ್ರದಲ್ಲಿ ನಾವು ಸುಪ್ರೀಮ್. ನಾವು ಯಾರಿಗೆ ಕೆಲಸ ಹೇಳುತ್ತೇವೆ, ಅವರಿಗೇ ಕೊಡಬೇಕು. ಅದು ಅವಶ್ಯಕ ಇದೆಯೋ ಇಲ್ಲವೋ. ಇನ್ನೊಂದು ಕಡೆ ಸ್ಕೂಲಬಿಲ್ಡಿಂಗ್‌ನ ಅವಶ್ಯಕತೆ ಇದ್ದರೂ, ಅಲ್ಲಿ ಕೊಡುವಹಾಗಿಲ್ಲ. ಅವರು ಹೇಳುತ್ತಾರೆ, ಹತ್ತು ಸ್ಕೂಲುಗಳು ಬಂದರೆ ನನಗೆ ಒಂದು ಸ್ಕೂಲ್. ಅಲ್ಲಿ ಅವಶ್ಯಕತೆ ಇರಲಿ ಬಿಡಲಿ. ಕೊನೆಗೆ ಏನು ಕಟ್ಟಿಸುತ್ತಾರೆ ಎಂದರೆ ಅಡಿಶನಲ್ ರೂಮ್ಸು ಕಟ್ಟಿಸುವುದು ಇನ್ನೊಂದು ಕಡೆ ಸ್ಕೂಲ್ ಬಿಲ್ಡಿಂಗ್ ಇರುವುದಿಲ್ಲ. ಈ ಒಂದು ಪರಿಸ್ಥಿತಿ ಇದ್ದಾಗ ಅದರ ಬಗ್ಗೆ ತಾವು ಏನು ಚಿಂತನೆ ಮಾಡಿದ್ದೀರಿ? ಈಗ

ಉದಾಹರಣೆಗೆ ಪಿರೋಜ್ ಅವಲನಲ್ಲಿ ಗ್ರಾಮಸಭೆಗಳನ್ನು ಮಾಡಿ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಪ್ರಸ್ತಾಪನೆ ಬಂತು. ಅದರ ಪ್ರಕಾರ ಕೆಲವು ತಾಲ್ಲೂಕು ಪಂಚಾಯಿತಿಗಳು ಒಪ್ಪುವುದಿಲ್ಲ. ಅಧಿಕಾರಿಗಳು ಹೋಗಿ ತಮಗೆ ಬೇಕಾದ ಗ್ರಾಮಪಂಚಾಯಿತಿ ಹೆಸರುಗಳನ್ನು ಸೇರಿಸಿಕೊಂಡು ಬಂದಿದ್ದರೆ ಒಪ್ಪಿಕೊಳ್ಳುತ್ತಾರೆ. ತಮಗೆ ಬೇಕಾದ ಹೆಸರು ಇಲ್ಲದಿದ್ದರೆ ಪುನಃ ಇನ್ನೊಂದು ಸಾರಿ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಅವರ ಹೆಸರು ಇವರಲ್ಲಿ ಬಂದರೆ, ಲಿಸ್ಟಿಗೆ ಒಪ್ಪಿಗೆಯನ್ನು ಕೊಡುತ್ತಾರೆ. ಬರಲಿಲ್ಲವಾದರೆ ಒಪ್ಪಿಗೆಯನ್ನು ಕೊಡುವುದಿಲ್ಲ. ಇಂತಹ ಸಂದರ್ಭದಲ್ಲಿ ನೀವು ಹೇಗೆ ನ್ಯಾಯ ಕೊಡುತ್ತೀರಿ? ನಾನು ಕೇಳುತ್ತೇನೆ. ಏಕೆಂದರೆ ನಮ್ಮ ನಿಮ್ಮ ಎಲ್ಲರ ಅಲ್ಟಿಮೇಟ್ ಮೋಟಿವ್ ಏನೆಂದರೆ, ಆ ಜನರ ಅಭಿವೃದ್ಧಿಯಾಗಬೇಕು, ಜನರಿಗೆ ಸಹಾಯ ಆಗಬೇಕು. ಆ ಜನರ ಕಲ್ಯಾಣವಾಗಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡು ಈ ಕಾನೂನನ್ನು ತಂದಿದ್ದೇವೆ. ಅದಕ್ಕೆ ತಾವು ಯಾವರೀತಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದ್ದನ್ನು ಹೇಳಬೇಕು. ನನ್ನ ಜಿಲ್ಲೆಗೆ ಸಂಬಂಧಪಟ್ಟಹಾಗೆ, ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳಬೇಕು ಎಂದರೆ ನೀವು ಒಂದು ಸಿ.ಟಿ.ಡಿ. ರಿಪೋರ್ಟನ್ನು ತರಿಸಿಕೊಳ್ಳಿ ಅಥವಾ ಉನ್ನತವಾದ ಅಧಿಕಾರಿಗಳನ್ನು ಕಳಿಸಿ ಅಲ್ಲಿ ಯಾವರೀತಿಯಾಗಿ ಕೆಲಸ ನಡೆದಿದೆ, ಆ ಜೂನಿಯರ್ ಇಂಜನಿಯರ್, ಅಸಿಸ್ಟೆಂಟ್ ಇಂಜನಿಯರ್ ಅವರ ಅನಿಸಿಕೆ ಏನು? ಬಿ.ಡಿ.ಒ. ಅನಿಸಿಕೆ ಏನು? ಚೀಫ್ ಸೆಕ್ರೆಟರಿ ಅನಿಸಿಕೆ ಏನು ಎನ್ನತಕ್ಕಂಥದ್ದನ್ನು ಕೇಳಿ ತಿಳಿದುಕೊಂಡು ಕೊನೆಗೆ ನಿಮ್ಮ ಮನಸ್ಸಿಗೆ ಏನಾದರೂ ಪರಿಣಾಮವಾದರೆ ನೀವು ಕ್ರಮ ತೆಗೆದುಕೊಳ್ಳಿ. ನಾವು ಎಷ್ಟು ಸಲ ಹೇಳುವುದು? ಇವತ್ತು ಕೋಟ್ಯಾಂತರ ರೂಪಾಯಿ, ಒಂದೊಂದು ತಾಲ್ಲೂಕಿನಲ್ಲಿ ಒಂದು ಕೋಟಿ, ಎರಡು ಕೋಟಿ ರೂಪಾಯಿಗಳ ಸೇವಿಂಗ್ಸ್ ಇದೆ. ಬ್ಯಾಕಲಾಗ್ ಇರಬಹುದು. ಬ್ಯಾಕಲಾಗ್ 10ಕೋಟಿ ನ್ಯಾಚುರಲ್ಲಿ ಓಪನಿಂಗ್ ಬ್ಯಾಲೆನ್ಸ್ ಇದ್ದರೆ ಅದು ಹಿಂದೆ ಉಳಿದದ್ದು ಮುಂದೆಯೂ ಕೂಡ ಉಳಿಯುತ್ತದೆ ಎಂದಲ್ಲ. ಆದರೆ 11 ತಿಂಗಳಲ್ಲಿ ಅವರು ಎಷ್ಟು ಹಣ ಖರ್ಚು ಮಾಡಬೇಕಾಗಿತ್ತು, ಇವತ್ತ ಎಷ್ಟು ಖರ್ಚು ಮಾಡಿದ್ದಾರೆ ಎಂದು ನೋಡಬೇಕು. ಅದಕ್ಕೆ ಒಂದು ಸಬೂಬು ಏನು ಹೇಳುತ್ತಾರೆ ಎಂದರೆ, ಆಕ್ಷನ್ ಪ್ಲಾನ್ ಬೇಗನೆ ಅಪ್ರೂವ್ ಆಗಲಿಲ್ಲ, ಅದಕ್ಕಾಗಿ ಬೇಗನೆ ಮಾಡಲಿಲ್ಲ ಎಂದು. ಹಾಗಲ್ಲ, ಕೆಲವು ಕಡೆ ಆ ಆಕ್ಷನ್ ಪ್ಲಾನ್ ಅಪ್ರೂವ್ ಆದರೂ ಕೂಡ ಮೂರು-ನಾಲ್ಕು ತಿಂಗಳಲ್ಲಿ ನಿಮ್ಮ ಟಾರ್ ರೋಡ್ ಮಾಡುವುದು ಅಥವಾ ಬೇರೆ ರಸ್ತೆ ಮಾಡುವುದು, ಕಲ್ವರ್ಟ್ ಮಾಡುವುದು, ಸ್ಕೂಲ್ ಬಿಲ್ಡಿಂಗ್ ಮಾಡುವುದು ದೊಡ್ಡ ಮಾತಲ್ಲ. ಆದರೆ ಅವರು ಏನು ಮಾಡುತ್ತಾರೆ ಎಂದರೆ, ಇಂತಿಂಥವರಿಗೇ ಕೆಲಸ ಕೊಡಬೇಕೆಂದು ಲಿಸ್ಟ್ ಮಾಡಿಕೊಂಡು ಹಠ ಹಿಡಿದು ಚೀಫ್ ಸೆಕ್ರೆಟರಿಗೆ, ಇಂಜನಿಯರಿಗೆ ಏನು ಕೊಡುತ್ತಾರೆ, ಇದರಿಂದಾಗಿ ಅನೇಕ ಕೆಲಸಗಳು ಡಿಲೇ ಆಗುತ್ತವೆ. ಕೆಲಸ ಡಿಲೇ, ಕರಪ್ಶನ್ ಜಾಸ್ತಿ ಮತ್ತು ಇವತ್ತಿನ ದಿವಸ ಯಾವುದೇ ಕೆಲಸ ಕೊನೆಗೆ ಹೋಗಿ ಮುಟ್ಟಿಸುತ್ತಾರೆ ಅಂತ ಅಲ್ಲ. ಹೀಗೆ ಜಗಳದಲ್ಲಿ ಸಾಕಷ್ಟು ವ್ಯತ್ಯಾಸಗಳು ಆಗುತ್ತವೆ. ಅದಕ್ಕಾಗಿ ಸರ್ಕಾರ ಅಂತಹ ಕಡೆ ತಕ್ಷಣ ಕ್ರಮ ತೆಗೆದುಕೊಂಡು ಏನಾದರೂ ಎಕ್ಸಪ್ಲನೇಶನ್ ಕಾಲ್‌ಫಾರ್ ಮಾಡಿ, ಎನಕ್ವೈರಿ ಕಂಡಕ್ಟ್ ಮಾಡಿ. ಇದನ್ನು ಮಾಡುತ್ತೀರೋ? ನಾನು ಸೂಪರಸೀಡ್ ಮಾಡಿ ಎಂದು ಹೇಳುವುದಿಲ್ಲ. ಏಕೆಂದರೆ ಇಲ್ಲಿ ಇನ್ನೊಬ್ಬರು ಅಧ್ಯಕ್ಷರು ಬರಬಹುದು ಅಥವಾ ಬೇರೆ ಸ್ಟ್ಯಾಂಡಿಂಗ್ ಕಮಿಟಿ

ಆಗಬಹುದು. ಆದರೆ ಎಲ್ಲಿ ನ್ಯೂನತೆ ಇದೆ, ಅಂತಹ ಕಡೆ ಯಾವ ಕ್ರಮ ತೆಗೆದು ಕೊಳ್ಳುತ್ತೀರೆಂದು ನಾನು ಕೇಳಬಯಸುತ್ತೇನೆ ಮತ್ತು ಏನೊಂದು ಕರಪ್ಷನ್ ಇದೆ ಅದು ಕೆಳಮಟ್ಟದಲ್ಲಿಯೂ ಇದೆ. ನಿಜವಾಗಿ ಹೇಳುವುದಾದರೆ ಡೆವಲಪಮೆಂಟನ್ನು ವಿಕೇಂದ್ರಿಕರಣ ಆಗಿಲ್ಲ. ಕರಪ್ಷನ್ ಇತ್ತು ಜಾಸ್ತಿಯಾಗಿದೆ. ಯಾರಾದರೂ ಕೇಳುವುದಕ್ಕೆ ಹೋದರೆ ಮೈಮೇಲೆ ಬರುತ್ತಾರೆ. ಬಿಡಿರಿ, ಮೇಲೆ ಇಲ್ಲವೇನು? ಮೇಲಿನವರು ಮಾಡುವುದಿಲ್ಲವೇನು? ನಾವಷ್ಟೇ ಮಾಡುತ್ತೇವೆಯೋ? ಎಂದು ಅವರು ಹೇಳುತ್ತಾರೆ. ಈ ಹಣವನ್ನು ತೆಗೆದುಕೊಂಡು ಹೋಗಿ ಎಲ್ಲಿ ಮುಟ್ಟುತ್ತೇವೋ ಗೊತ್ತಿಲ್ಲ.

ಅಧ್ಯಕ್ಷರು : ನಿಮ್ಮ ಊರಿನಲ್ಲಿ ಹಾಗೆ ಹೇಳುತ್ತಾರೆ. ನಮ್ಮ ಊರಲ್ಲಿ ಏನು ಹೇಳುತ್ತಾರೆ ಎಂದರೆ ಮೇಲೆ ಎಲ್ಲ ದೊಡ್ಡದು ಸಿಗುತ್ತದೆ, ಇಲ್ಲಿ ಕೆಳಗೆ ಬರೀ ಟಿಪ್ಸ ಸಿಗುತ್ತದೆ ಎಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಈಗ ಪೂರ್ತಿ ಹಣವೇ ಕೆಳಗಡೆ ಹೋಗಿದೆ. ಟಿಪ್ಸ ಇಲ್ಲ. ನೇರವಾಗಿ ತಾಲ್ಲೂಕು ಪಂಚಾಯಿತಿಗೆ, ಜಿಲ್ಲಾ ಪಂಚಾಯಿತಿಗೆ ಹೋಗುವ ಹಣ, ಪಂಚಾಯತಿಗೆ ಹೋಗುವ ಹಣ ಎಲ್ಲಿಗೋ ಹೋಗುತ್ತಿದೆ. ಅವರ ಹತ್ತಿರ ಇರತಕ್ಕಂಥ ಹಣವನ್ನು ಅವರು ಸರಿಯಾದ ರೀತಿಯಲ್ಲಿ ಖರ್ಚುಮಾಡದೇ ಹೋದರೆ, ಖಂಡಿತವಾಗಿಯೂ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಮತ್ತು ಕೊನೆಗೆ ಯಾರ್‍ಯಾರು ಮತಕ್ಷೇತ್ರದಲ್ಲಿ ಶಾಸಕರಾಗಿದ್ದಾರೋ, ಅವರಿಗೂ ಕೆಟ್ಟ ಹೆಸರು ಬರುತ್ತದೆ. ಒಳ್ಳೆಯ ಕೆಲಸ ಆದರೆ ಅವರಿಗೆ ಹೆಸರು ಬರುತ್ತದೆ. ಕೆಟ್ಟ ಕೆಲಸ ಆದರೆ ಅವರು ಅದಕ್ಕೆ ಜವಾಬ್ದಾರರಲ್ಲದಿದ್ದರೂ, ನಿಮ್ಮ ಕಾಲದಲ್ಲಿ ಏನಾಗಿದೆ ಎಂದರೆ ಆ ಜವಾಬ್ದಾರಿಯಾಗಲೀ, ಅಲಿಗೇಶನ್ ಆಗಲಿ ಅವರ ಮೇಲೂ ಕೂಡ ಬರುತ್ತದೆ. ಆದ್ದರಿಂದ ದಯವಿಟ್ಟು ಇದಕ್ಕೆ ಏನಾದರೂ ಕಂಡುಹಿಡಿದು ಅಂತಹವರು ಮೇಲೆ ಕ್ರಮರಿವ್ಯೂಮಾಡುವುದಕ್ಕೆ ಕಳಿಸಬೇಕು. ಒಂದೊಂದು ಟೀಮ್ ಮಾಡಿ, ಡಿವಿಜನರ್ವೈಸ್ ಮಾಡಿ ಗುಲ್ಬರ್ಗಾ ಡಿವಿಜನ್, ಬೆಳಗಾವಿಗೆ ಒಂದು ಮೈಸೂರು, ಹೀಗೆ ನಾಲ್ಕೈದು ಟೀಮುಮಾಡಿ ಅವರು ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಹೋಗಿ ಅಡ್ಡಾಡಬೇಕು ಎಷ್ಟು ಹಣ ಕೊಟ್ಟಿತ್ತು, ಎಷ್ಟು ಹಣ ಖರ್ಚಾಗಿದೆ ಎಂದು ರ್‍ಯಾಂಡಮ್ ಆಗಿ ಐದಾರು ಕೇಸುಗಳನ್ನು ಚೆಕ್ ಮಾಡುವ ವ್ಯವಸ್ಥೆಯನ್ನು ತಾವು ಜಾರಿಗೆ ಕೊಡಬೇಕು. ಎಲ್ಲವನ್ನೂ ಕೂಡ ನಿಲ್ಲಿಸುವುದಕ್ಕೆ ಆಗುತ್ತದೆ ಎಂದು ನಾನು ಹೇಳುವುದಿಲ್ಲ. ಇದು ಯಾರ ಕೈಯಲ್ಲೂ ಆಗುವ ಮಾತಲ್ಲ. ಆದರೆ ಹಾಡು ಹಗಲಿನಲ್ಲಿ ಏನು ದರೋಡೆ ನಡೆಯುತ್ತಿದೆ, ಇದರ ಬಗ್ಗೆ ತಾವು ಆಸಕ್ತಿ ವಹಿಸುತ್ತೀರಿ ಎಂದು ತಿಳಿದುಕೊಂಡು, ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸಭಾಧ್ಯಕ್ಷರೇ, ನಾವು ಕಾನೂನು ಮತ್ತು ರಾಜ್ಯಾಂಗವನ್ನು ತಂದಿದ್ದು, on the basis of theory of separation of powers ರಾಜ್ಯಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಎಂದು ಮಾಡಿದ್ದೇವೆ. ಈಗ ಏನು ತಿದ್ದುಪಡಿ ತಂದಿದ್ದಾರೆಂದು ಹೇಳಿದರೆ, ಆರ್ಟಿಕಲ್ 52ರಲ್ಲಿ Chief executive powers ಇವತ್ತು ತಾವೇನು ಕೊಟ್ಟಿದ್ದೀರಿ. ಎಕ್ಸಿಕ್ಯೂಟಿವ್ ಹೆಡ್ ಯಾರು? President will be the head of the Union, Article 52 and

here Governor is the head of the executive ಇಲ್ಲಿ ತಾವೇನು ಮಾಡಿದ್ದೀರಿ ಎಂದರೆ, ಈ ನಪದಲ್ಲಿ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಎಂದು ಹೇಳಿ, ಆಬ್ಜೆಕ್ಟ್ ಏನೋ ತಂದಿದ್ದೀರಿ. ಅಂದರೆ exceutive powers have been conferred on elected body ಮೂಲಭೂತವಾಗಿ ಇದು ತರುವುದಕ್ಕೆ ಸಾಧ್ಯವಿಲ್ಲ. ಇದನ್ನು ಹೇಗೆ ತಂದಿರಿ ಎಂದು ನನಗಂತು ಖಂಡಿತವಾಗಿಯೂ ಅರ್ಥವಾಗಿಲ್ಲ. ನಾಳೆ, answerable and accountable ಏನಾದರೂ, ಇವತ್ತ ಚೀಫ್ ಆಫೀಸರ್ ಅಥವಾ ಚೀಫ್ ಸೆಕ್ರೆಟರಿ ಏನಾದರೂ ಜಿಲ್ಲಾಪರಿಷತ್ತಿನಲ್ಲಿ ಅಕ್ರಮ ನಡೆಸಿದರು ಎಂದರೆ, ಮೇಲಧಿಕಾರಿ ಇದ್ದರೂ, ಡಿಪಾರ್ಟ್‌ಮೆಂಟ್ ಎನಕ್ವೈರಿ ಮಾಡಬಹುದಾಗಿತ್ತು. ಈಗ ತಾವೇನು ಮಾಡಿದ್ದೀರಿ, ಪ್ರೆಸಿಡೆಂಟ್ ಮತ್ತು ಇವರಿಗೆ ಚೀಫ್ ಎಕ್ಸಿಕ್ಯುಟಿವ್ ಪವರ್ಸ್ ನೀವು ಕೊಟ್ಟಿರುದರಿಂದ, ಈ ಎಲ್ಲಾ ಆಫೀಸರ್ಸ್ ಕೂಡ ಅವರ ಕೈಲಿ ಸಬಾರ್ಡಿನೇಟ್ ಆಗುತ್ತಾರೆ. ನೀವು ರಹಸ್ಯ ವರದಿ ಬರೆಯುತ್ತೀರಿ. ಅಪಾಯಿಂಟಿಂಗ್ ಅಥಾರಿಟಿ ಯಾರು? ಡಿಸಿಪ್ಲೀನರಿ ಅಥಾರಿಟಿ ಯಾರು? ಡಿಸಮಿಸ್ ಈಟಿ ಅಥಾರಿಟಿ ಯಾರು? ಇಲ್ಲಿ ಯಾರಿಗೆ ಕೊಟ್ಟಿದ್ದೀರಿ. ಅಥವಾ ನೀವು ಅವರಿಗೆ ಕೊಟ್ಟಿಲ್ಲವೆಂದರೆ, ಇದು ನಾಮಕಾವಸ್ತೆಯಾಗುತ್ತದೆ. ಅವರಿಗೆ ಅಧಿಕಾರ ಕೊಟ್ಟಿದಾಗ ಆಗುವುದಿಲ್ಲ. ಬೇರೆಯವರಿಗೆ ಡಿಸಿಪ್ಲೀನರಿ ಅಥಾರಿಟಿ ಕೊಡುವುದಾದರೆ, ಚೀಪ್ ಎಕ್ಸಿಕ್ಯುಟಿವ್ ಆಫೀಸರಿಗೆ ಪವರ್ ಕೊಡುವುದಿಲ್ಲ. ಇವೆರಡಲ್ಲೂ ಕಾಂಕ್ರೀಟಿ ಆಗುತ್ತದೆ. ಆದ್ದರಿಂದ, ಈ ಕಾನೂನು ರಾಜ್ಯಾಂಗವಾಗಿ ತಾವು ತರುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ತಮ್ಮ ಮುಖಾಂತರದ ಸರ್ಕಾರದ ಗಮನಕ್ಕೆ ತರುತ್ತೇನೆ. ಇದನ್ನು ಎಕ್ಸಾಮಿನ್ ಮಾಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಇದು ವಿತ್ತಂಡ ವಾದ. ವಿತಂಡವಾದಕ್ಕೆ ಇದು ಸರಿಯಾದುದು.

ಅಧ್ಯಕ್ಷರು : ನಮ್ಮ ಅಧ್ಯಕ್ಷರುಗಳು, ಆಫೀಸರುಗಳ ಹಿಂದೆ ಚೇಲ ಹಿಡಿದುಕೊಂಡು ತಿರುಗಬಾರದು, ಎಲೆಕ್ಟೆಡ್ ರೆಪ್ರೆಸೆಂಟಿಟೀವ್ಸ್‌ಗೆ, ತಮ್ಮ ಆಡಳಿತವನ್ನು ನಡೆಸಿಕೊಳ್ಳುವ ಶಕ್ತಿ ಇರಬೇಕು. ಎಂದು ಮಾಡಿದ್ದಾರೆ. ನಮಗೆ ಕಾನೂನು ಗೊತ್ತಾಗುವುದಿಲ್ಲ, ನಾವು ಓದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಚೀಫ್ ಮಿನಿಸ್ಟರು, ಚೀಫ್ ಸೆಕ್ರೆಟರಿ ಇವರಲ್ಲಿ ವ್ಯತ್ಯಾಸ ಇದೆಯೋ ಇಲ್ಲವೋ? ಇವತ್ತು ಚೀಫ್ ಸೆಕ್ರೆಟರಿ ಪವರ್ಸ್‌ನ್ನು, ನೀವು ಚೀಫ್ ಮಿನಿಸ್ಟರಿಗೆ ಮಾಡುತ್ತೇವೆಂದು ಹೇಳಿದರೆ, executive powers will be cut off completely ಇದು ಸಾಧ್ಯವೇ ಇಲ್ಲ, ರಾಜ್ಯಾಂಗಬದ್ಧವಾಗಿ ಇದು ಸಾಧ್ಯವಿಲ್ಲ. Separation of powers ಎನ್ನುವುದರ ಬಗ್ಗೆ...

MR. SPEAKER : It Chief Minister were to give a wrong order to Chief Secretary is well within his rights to advise or turn down the order of the Chief Minister of it is illegitimate or illegal. But Chief Secretary has no business to dishonour the order of Chief Minister if it is a legitamate order. I want the elected representative at the lower level also to have the same privilege. I don't want the elected representative to become the subordinate

of the Government servants. Fix the accountability. The theory of taking away the power from the elected repesentative and conferring it on a beaurocrat is not correct.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಬಾರ್ಡಿನೇಟ್ ಅಲ್ಲ ಅಧ್ಯಕ್ಷರೇ.

MR. SPEAKER : You fix the accountability. The theory of taking away the powers from the elected representative and conferring it on a beaurocrat is not coorect.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಕೌಂಟಬಲಿಟಿ ಅಮೇಲೆ ಫಿಕ್ಸ್ ಮಾಡುತ್ತೇವೆ ಎನ್ನುವುದನ್ನು ನೋಡಬೇಕಾಗುತ್ತದೆ. ಈಗೇನಾದರೂ ಕಂಟೆಂಪ್ಟ್ ಆಫ್ ಕೋರ್ಟ್ ಆದರೆ, ಈ ಎಲ್ಲಾ ಸೆಕ್ರೆಟರಿಗಳೂ ಕೂಡ absolve ಮಾಡುತ್ತಾರೆ.

ಅಧ್ಯಕ್ಷರು : ಪಂಚಾಯತಿ ಚೇರ್ಮನ್‌ಗಳೆಲ್ಲರೂ ಬ್ಯಾಗ್ ಹಿಡಿದುಕೊಳ್ಳುವುದು, ಸೆಕ್ರೆಟರಿ ಹಿಂದೆ ಹೋಗುವುದು,

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ರಾಮಕೃಷ್ಣರವರೂ ಕೂಡ ಇಂತಹ ವಿತಂಡವಾದವನ್ನು ಒಪ್ಪಲಿಕ್ಕಿಲ್ಲ.

ಅಧ್ಯಕ್ಷರು : ಮಾನ್ಯ ಬಂಗಾರಪ್ಪನವರು ಇಲ್ಲಿ ಕುಳಿತಿದ್ದಾರೆ, ಅವರು ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು, ಅವರು ಒಪ್ಪುತ್ತಾರೆಯೇ ಕೇಳೋಣ. ತಾವು ಮುಖ್ಯಮಂತ್ರಿಯಾದಂಥವರು. ತಾವು ಒಂದು ಆರ್ಡರ್ ಹೊರಡಿಸುತ್ತೀರಿ. ಹೊರಡಿಸಿದಂಥ ಆರ್ಡರು ಸಂವಿಧಾನಬದ್ಧವಾಗಿಲ್ಲದೇ ಹೋದರೆ, ಕಾನೂನಿಗೆ ವಿರುದ್ಧವಾಗಿದ್ದರೆ, ನಿಮ್ಮ ಚೀಫ್ ಸೆಕ್ರೆಟರಿ ನಿಮಗೆ ಅಡ್ವೈಸ್ ಮಾಡುತ್ತಾರೆ ಅಥವಾ ನಾನು ಇದನ್ನು ಕ್ಯಾರಿಔಟ್ ಮಾಡುವುದಿಲ್ಲವೆಂದು ಹೇಳುತ್ತಾರೆ. ನ್ಯಾಯಬದ್ಧವಾಗಿರತಕ್ಕ ಆರ್ಡರನ್ನು ತಾವು ಹೊರಡಿಸಿದಾಗ, ಚೀಫ್ ಸೆಕ್ರೆಟರಿ ನಾನು ಕ್ಯಾರಿಔಟ್ ಮಾಡುವುದಿಲ್ಲವೆಂದರೆ, ನೀವು ಸುಮ್ಮನಿರುತ್ತೀರೋ?

ಶ್ರೀ ಎಂ. ಪಿ. ಪ್ರಕಾಶ್ : ಇದು ಫೀಜ್ ಇಲ್ಲದೇ ಇರತಕ್ಕ ವಾದ ಎನ್ನುವ ಕಾರಣಕ್ಕಾಗಿಯೇ ಅವರು ಸರಿಯಾಗಿ ವಾದ ಮಾಡಲಿಲ್ಲ. ಹಾಗೆಯೇ ಸುಮ್ಮನೆ ವಾದಕ್ಕಾಗಿ, ವಾದ ಮಾಡಬೇಕೆಂದು ಮಾಡುತ್ತಿದ್ದಾರೆ.

ಅಧ್ಯಕ್ಷರು : ನನಗೆ ಈ ಸತ್ಯ ಗೊತ್ತಿರಲಿಲ್ಲ.

+ ಶ್ರೀ ಎಸ್. ಬಂಗಾರಪ್ಪ : ಮಾನ್ಯಸಭಾಧ್ಯಕ್ಷರೇ, ಕಾನೂನು ಪ್ರಕಾರ, ಇವತ್ತು ಎಲೆಕ್ಟೆಡ್ ಬಾಡೀಸ್ ಏನಿದ್ದಾವೆ, ಅದ್ಯಾವರು ಹೇಳಿದಹಾಗೆ, ಪ್ರಸಿಡೆಂಟ್ ಆಫ್ ಇಂಡಿಯಾ ಇರಬಹುದು ಪ್ರೈಮ್ ಮಿನಿಸ್ಟರ್, because he also is the executive head ಆಫೀಷಿಯಲ್ಲಾಗಿ ಅವರ

ಆರ್ಡರನ್ನು ಕ್ವಾಶ್ ಮಾಡುವವರು. ಅಫಿಷಿಯಲ್ ಹೆಡ್ ಎಂದರೆ, ಚೀಫ್ ಸೆಕ್ರೆಟರಿ ಎಂದು ಇಟ್ಟುಕೊಳ್ಳೋಣ. Chief Secretary of the Uinon Government or Chief Secretary of the State Government. ಜಿಲ್ಲಾಪರಿಷತ್ತಿನಲ್ಲೂ ಕೂಡ ಚೀಫ್ ಸೆಕ್ರೆಟರಿ, ತಾಲ್ಲೂಕು ಪಂಚಾಯ್ತಿಯಲ್ಲಿ ಚೀಫ್ ಎಕ್ಸಿಕ್ಯುಟಿವ್ ಆಫೀಸರ್, ಪಂಚಾಯ್ತಿಗಳಲ್ಲಿ ಸೆಕ್ರೆಟರಿ ಈ ರೀತಿ ಬರುತ್ತದೆ. ಮಾನ್ಯ ಸಭಾನಾಯಕರವರೂ ಇಲ್ಲಿ ಹೇಳುತ್ತಾ ಇದ್ದರು. ಆದರೂ, ನಾವು ಮಾತನಾಡುತ್ತಾ ಇದ್ದೇವೆ, ಸ್ವಲ್ಪ ವಿಭಿನ್ನವಾಗಿ ಅಭಿಪ್ರಾಯ ಬರುತ್ತಾ ಇದೆ, ಅಂದರೆ, ತಪ್ಪು ಬಗ್ಗೆ ಎಂದಲ್ಲ. ಇಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ. ಎಲೆಕ್ಟೆಡ್ ಬಾಡೀಸ್ ನಾವೇ ಆರ್ಡರ್ ಬರೆದು, ಡೈರೆಕ್ಷನ್ನೂ ಕೊಡತಕ್ಕ ಅಧಿಕಾರ ನಮಗಿದೆ. ಅದು ಮೂಲ ಮಂತ್ರ. ಆದರೆ, ಕಾನೂನು ಪ್ರಕಾರ, ಅದು ಇದೆಯೋ ಇಲ್ಲವೋ ಎಂದು ನೋಡತಕ್ಕಂಥದ್ದು ಬ್ಯುರೋಕ್ರಸಿಯಲ್ಲಿರತಕ್ಕಂಥವರ ಕರ್ತವ್ಯ. ಅವರು ನೋಡಬೇಕು. ನಾವು ಒಂದುಸಾರಿ ಆರ್ಡರ್ ಮಾಡಬೇಕಾದರೆ, ನಾವು ಇರಬಹುದು, ತಾವು ಇರಬಹುದು ಅಥವಾ ಗ್ರಾಮ ಪಂಚಾಯಿತಿಗಳಲ್ಲಿ, ಏಕೆಂದರೆ, ಕಾನೂನು ಓದಿ, ಅದರ ಬಗ್ಗೆ ಅಭ್ಯಾಸ ಮಾಡಿ, ನಡೆಸತಕ್ಕ ವಿಚಾರ ಬ್ಯುರೋಕ್ರಸಿ ಕೈಯಲ್ಲಿ ಕೊಡುವುದಕ್ಕಾಗುವುದಿಲ್ಲ. ಎಲೆಕ್ಟೆಡ್ ಬಾಡೀಸ್‌ಗೆ ಕೊಡತಕ್ಕಂಥ ಅಧಿಕಾರ, ನೀವು ಬ್ಯುರೋಕ್ರಸಿಗೆ ಕೊಡುವುದಕ್ಕೆ ಬರುವುದಿಲ್ಲ. ಆ ವಾದ ಪ್ರಜಾಪ್ರಭುತ್ವ ಆಗುವುದಿಲ್ಲ. ಅದಕ್ಕಾಗಿ, ಸಾರ್ವಜನಿಕ ಹಿತವನ್ನು ಗಮನದಲ್ಲಿಟ್ಟು ನಿರ್ವಹಣೆ ಮಾಡಬೇಕು. ಕಾನೂನು ನಾವು ಮಾಡುತ್ತೇವೆ.

ಇದರ ಬಗ್ಗೆಯು ತಿಳುವಳಿಕೆ ಕೊಡಬೇಕು. ಕೊಡತಕ್ಕಂಥ ವಿಚಾರ ಮಾತ್ರ ಅಧಿಕಾರಿಗಳಿಗೆ ಇದೆ. ಉದಾಹರಣೆಗೆ ನಾವೊಂದು ಆರ್ಡರ್ ಮಾಡುತ್ತೇವೆ. ಗ್ರಾಮಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು. ಅಥವಾ ಜಿಲ್ಲಾಪರಿಷತ್. ಅವರಿಗೆ ಅಧಿಕಾರ ಇದ್ದಾಗ ನಾನು ಹೇಳುವುದು, ಇಲ್ಲಿರತಕ್ಕಂಥಾದ್ದು ಚೀಫ್ ಮಿನಿಸ್ಟರ್, ಪ್ರಧಾನಿಗಳು, ಮಂತ್ರಿಗಳು ಇತ್ಯಾದಿಯವರು ನಾವು ಮಾಡುತ್ತೇವೆ. ಕಾನೂನು ಪ್ರಕಾರ ಕರೆಕ್ಟಾಗಿದ್ದರೆ, ಕರೆಕ್ಟ್ ಎಂದೇ ಸಂಬಂಧಪಟ್ಟ ಚೀಫ್ ಸೆಕ್ರೆಟರಿ, ಸೆಕ್ರೆಟರಿ ಇತ್ಯಾದಿಯವರು, ಹೇಳುತ್ತಾರೆ. ಕಾನೂನಿಗೆ ವಿರೋಧವಾಗಿ ಏನಾದರೂ ಆರ್ಡರ್, ನಾವು ಮಾಡಿದ್ದರೆ, ಅವರು ಟರ್ನ್‌ಡೌನ್ ಮಾಡುವುದಕ್ಕೆ ಬರುವುದಿಲ್ಲ. ತಾವೊಂದು ಮಾತನ್ನು ಪ್ರಯೋಗ ಮಾಡಿದಿರಿ. ಕ್ಷಮಿಸಬೇಕು, ಅಂದರೆ, ಒಳ್ಳೆಯಅಭಿಪ್ರಾಯದಲ್ಲೇ ತಾವು ಹೇಳಿದಿರಿ. ಟರ್ನ್‌ಡೌನ್ ಮಾಡಬಹುದು. ಕಾನೂನು ಪ್ರಕಾರ ಇದು ಸರಿಯಿಲ್ಲ, ಆದ್ದರಿಂದ ಜಾರಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ನನ್ನ ಅಭಿಪ್ರಾಯವಾಗಿರುತ್ತದೆ, ಎಂದು ಮಾತ್ರ ಬರೆಯಬೇಕೆಂಬ ಅರ್ಥದಲ್ಲಿ ತಾವು ಹೇಳಿದ್ದೀರಿ. ಎಂದು ನಾನು ಭಾವಿಸಿದ್ದೇನೆ. ನಿಮ್ಮ ಉದ್ದೇಶ ಸರಿ ಇದೆ. ಆದರೆ, ಇವರು ಬರೆದದ್ದೇ ಟರ್ನ್‌ಡೌನ್ ಮಾಡಿಕೊಂಡು ಹೋಗಿಬಿಟ್ಟರೆ, ಪಾಯಿಂಟ್ ಹುಡುಕಿಕೊಂಡು ಟರ್ನ್‌ಡೌನ್ ಮಾಡಿಕೊಂಡೇ ಹೋಗಿಬಿಡುತ್ತಾನೆ. ಆ ಅಧಿಕಾರವನ್ನು ಸೆಕ್ರೆಟರಿ, ಚೀಫ್ ಸೆಕ್ರೆಟರಿಗೆ ಕೊಡುವುದಕ್ಕೆ ಬರುವುದಿಲ್ಲ. ಆದರೆ, ಕಾನೂನು ಪ್ರಕಾರ ಇರತಕ್ಕಂಥ ವಿಚಾರದಲ್ಲಿ, ಕಾನೂನು ಪರಿಸ್ಥಿತಿ ಇಷ್ಟಿದೆ ಎನ್ನುವುದನ್ನು ಬರೆಯುವುದು ಅವರ ಕರ್ತವ್ಯ. ಸಾರ್ವಜನಿಕರ ಹಿತದೃಷ್ಟಿಯಿಂದ ಕಾನೂನು ಪ್ರಕಾರ ಜಾರಿಗೆ ಕೊಡಬೇಕೆಂಬ ಒಳ್ಳೆಯ ಉದ್ದೇಶದಿಂದ ಅದನ್ನು ಜಾರಿಗೆ ತರುವುದು ಇವರ ಕರ್ತವ್ಯವಾಗುತ್ತದೆ. ಆದ್ದರಿಂದ, ಇಲ್ಲಿ ನಾನು ಅದರ ಮೆರಿಟಿಗೆ ಹೋಗುವುದಿಲ್ಲ. ಅದರ ಬಗ್ಗೆ ಭಾಷಣ ಮಾಡುವುದಕ್ಕೆ ನನಗೆ

ಇಚ್ಛೆ ಇಲ್ಲ, ನನಗೆ ಅವರ ಅವಶ್ಯಕತೆಯೂ ಇಲ್ಲ. ತಾವು ಕೇಳಿದ್ದರಿಂದ, ನಾನು ಹೇಳಿದೆ. ಕಾನೂನು ಪ್ರಕಾರ ನಡವಳಿಕೆಯಲ್ಲಿರತಕ್ಕಂತಾದ್ದು ಎಕ್ಸಿಕ್ಯುಟಿವ್ ಹೆಡ್ ಅಥವಾ ಅಲ್ಲಿರತಕ್ಕಂಥ ಅಧಿಕಾರಿಗಳ ಸಹಕಾರ, ಅಲ್ಲಿ ಅವರು ಕಾನೂನಿನ ಒಂದು ಮಾರ್ಗದರ್ಶನ ಕೊಡತಕ್ಕಂಥಾದ್ದು ಅವರ ಕರ್ತವ್ಯ. ಅಷ್ಟೇ ಹೊಸದ ಜಾರಿಗೆ ನಾವು ಕೊಡಬೇಕೆಂದ ಮೇಲೆ ಗೌರವಯುತವಾಗಿ ಜಾರಿಗೆ ಕೊಡುವುದು ಕಾನೂನು ಚೌಕಟ್ಟಿನಲ್ಲಿ ಇದ್ದರೆ, ಅದು ಅವರ ಕರ್ತವ್ಯವಾಗುತ್ತದೆ. ಕಾನೂನಿಗೆ ವಿರೋಧವಾಗಿ ನಮ್ಮ ಆರ್ಡರ್ ಇದ್ದರೆ, ಅದು ಜಾರಿ ಕೊಡುವುದಕ್ಕೆ ಬರುವುದಿಲ್ಲ. ಅದನ್ನು ಮತ್ತೆ ನಮ್ಮ ಗಮನಕ್ಕೆ ತರತಕ್ಕಂಥಾದ್ದು ಅವರ ಕರ್ತವ್ಯ. ಇದನ್ನು ಬಿಟ್ಟರೆ, ಬೇರೆ ಏನೂ ವಿಚಾರ ಕಾಣುತ್ತಾ ಇಲ್ಲ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, 159ನೇ ಪ್ರಕರಣದ ತಿದ್ದುಪಡಿಯಲ್ಲಿ ಜಿಲ್ಲಾಪಂಚಾಯಿತಿಯಲ್ಲಿ, ರಾಜ್ಯಸಭಾ ಸದಸ್ಯರು, ಲೋಕಸಭಾ ಸದಸ್ಯರು ಮತ್ತು ಶಾಸಕರು ಸದಸ್ಯರಾಗಿರಬಹುದು ಎನ್ನತಕ್ಕಂಥ ಅಂಶ ಇದೆ. ಆದರೆ, ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತ್ತಿಗೆ, ಜಿಲ್ಲಾಪರಿಷತ್ ಸದಸ್ಯರು ಮತ್ತು ಶಾಸನ ಸಭಾಸದಸ್ಯರಿಗೆ ಸ್ಥಾನ ಏನಿದೆ? ಜಿಲ್ಲಾಪಂಚಾಯ್ತಿಯಲ್ಲೇನೋ ಅವರಿಗೆ ಸದಸ್ಯರೆಂದು ಮಾಡಿದ್ದೀರಿ, ಶಾಸಕರನ್ನು ಮತ್ತು ಲೋಕಸಭಾ ಸದಸ್ಯರನ್ನು ಮತ್ತು ನಿರ್ದಿಷ್ಟವಾಗಿ ರಾಜ್ಯಸಭಾ ಸದಸ್ಯರನ್ನು. ಆದರೆ, ತಾಲ್ಲೂಕು ಪಂಚಾಯ್ತಿಗೆ ಬಂದಂಥ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ, ಆವ್ಯಾಪ್ತಿಯಲ್ಲೇ ಶಾಸಕರೂ ಆಯ್ಕೆಯಾಗಿರುತ್ತಾರೆ, ಆ ತಾಲ್ಲೂಕು ಪಂಚಾಯಿತಿಯ ವ್ಯಾಪ್ತಿಯಲ್ಲೇ ಜಿಲ್ಲಾಪರಿಷತ್ತಿನ ಸದಸ್ಯರೂ ಕೂಡ ಆಯ್ಕೆಯಾಗಿರುವವರು ಇರುತ್ತಾರೆ. ಆದ್ದರಿಂದ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ, ಜಿಲ್ಲಾಪರಿಷತ್ತಿನ ಸದಸ್ಯರು ಆಯ್ಕೆಯಾಗಿರುತ್ತಾರೆ. ಶಾಸಕರೂ ಆಯ್ಕೆಯಾಗಿರುತ್ತಾರೆ. ಅದರಲ್ಲಿ ಇವರ ಸ್ಥಾನವೇನು ಎಂಬುದನ್ನು ಇದರಲ್ಲಿ ನಿರ್ದಿಷ್ಟಪಡಿಸಿಲ್ಲ. ಬರೀ ಜಿಲ್ಲಾ ಪಂಚಾಯಿತಿಗೆ ಮಾತ್ರ 159ರಲ್ಲಿ ನಿರ್ದಿಷ್ಟಪಡಿಸಿದ್ದೀರಿ. ತಾಲ್ಲೂಕು ಪಂಚಾಯಿತಿಯಲ್ಲಿ ಅವರ ಪರಿಸ್ಥಿತಿ ಏನು, ಅವರ ಸ್ಥಾನಮಾನವೇನು? ಅದು ಸ್ಪಷ್ಟವಾಗಿ ಇದರಲ್ಲಿ ತಿಳಿಸಬೇಕು. ಮತ್ತೆ 152ರ ತಿದ್ದುಪಡಿಯಲ್ಲಿ, ಈ ಅಧಿನಿಯಮದ ಮೇರೆಗೆ, ರಚಿಸಿದ ನಿಯಮಗಳ ಅಡಿಯಲ್ಲಿ ತನಗೆ ವಿಧಿಸಿದ ಎಲ್ಲಾ ಕರ್ತವ್ಯಗಳನ್ನೂ ನೆರವೇರಿಸತಕ್ಕದ್ದು ಮತ್ತು ಪ್ರಧಾನ ಮಾಡಿದ ಎಲ್ಲಾ ಅಧಿಕಾರಿಗಳನ್ನೂ ಚಲಾಯಿಸತಕ್ಕದ್ದು ಎಂದಿದೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ನೀವು ಎಕ್ಸಿಕ್ಯುಟಿವ್ ಪವರ್ಸ್ ಕೊಡುತ್ತಾ ಇದ್ದೀರಿ. ಎಕ್ಸಿಕ್ಯುಟಿವ್ ಪವರ್ಸ್ ಕೊಡುವುದರ ಜೊತೆಗೆ, ತಾಲ್ಲೂಕು ಪಂಚಾಯ್ತಿಗಳಲ್ಲಿ ಬರತಕ್ಕ ಎಲ್ಲಾ ಅಧಿಕಾರಿಗಳ ಮೇಲೆ ನಿಯಂತ್ರಣ ಇರತಕ್ಕಂಥಾದ್ದು, ಅಧಿಕಾರವನ್ನು ಚಲಾಯಿಸತಕ್ಕಂತಾದ್ದು ಎನ್ನುವ ಅಂಶ ಇದರಲ್ಲಿದೆ. ಆ ಅಧಿಕಾರಗಳು ಯಾವುವು? ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರತಕ್ಕಂಥ ಸಿ.ಇ.ಒ. ಬಿ.ಡಿ.ಒ., ಜೆ.ಇ., ಇವರ ಮೇಲೆ ಯಾವ ಯಾವ ನಿಯಂತ್ರಣ ಇಟ್ಟುಕೊಳ್ಳಬೇಕು. ಸಸ್ಪೆಂಡ್ ಮಾಡುವ ಅಧಿಕಾರ ಇದೆಯೇ, ರಹಸ್ಯ ವರದಿ ಬರೆಯುತಕ್ಕ ಅಧಿಕಾರ ಇದೆಯೇ?

5.10 ಪಿ.ಎಂ.

ಆ ರೀತಿಯ ಅಧಿಕಾರವನ್ನು ನೀವು ಅವರಿಗೆ ಇದರಲ್ಲಿ ಕೊಡುವುದೇ ಆದರೆ ಇದರಿಂದ ಆಗತಕ್ಕಂಥ ಪರಿಣಾಮಗಳು ಏನು ಎನ್ನತಕ್ಕಂಥಾದ್ದನ್ನು ಕೂಡ ಸ್ವಲ್ಪ ಆಲೋಚನೆ ಆಡಳಿತಾತ್ಮಕವಾದಂತಹ

ಕೆಲವು ನಿಯಮಗಳಲ್ಲಿ ಅನುಭವ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಆಗತಕ್ಕಂಥ ಅನಾಹುತಗಳಿಗೆ ಏನು ಪರಿಹಾರವನ್ನು ನೀವು ಈ 52ನೇ ನಿಯಮದಲ್ಲಿ ತೋರಿಸಿದ್ದೀರಿ. ಇದರಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲ. ಅದೇ ರೀತಿಯಲ್ಲಿ ಜಿಲ್ಲಾ ಪಂಚಾಯಿತಿ 193ನೇ ತಿದ್ದುಪಡಿಯಲ್ಲಿ ಕೂಡ ಸ್ಪಷ್ಟಪಡಿಸಿಲ್ಲ ಯಾವ ರೀತಿಯಾದ ನಿಯಂತ್ರಣ ಅಂತ ಹೇಳಿ. ಇದರಲ್ಲಿ ಒಂದು ಮೂಲಭೂತವಾದ ವಿಷಯವನ್ನು ಮಾನ್ಯ ವೈ. ರಾಮಕೃಷ್ಣ ಅವರು ಪ್ರಸ್ತಾಪ ಮಾಡಿದರು ಅದನ್ನು ನಾನು ಕೂಡ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಾಲ್ಲೂಕು ಪಂಚಾಯಿತಿಯವರಿಗೆ ಎಕ್ಸಿಕ್ಯೂಟೀವ್ ಪವರ್ಸ್‌ನ್ನು ಕೊಟ್ಟಿದ್ದೀರಿ. ಜಿಲ್ಲಾಪಂಚಾಯತಿಯವರಿಗೆ ಅಧ್ಯಕ್ಷರ ಪರಿಸ್ಥಿತಿ ಏನು? ಇಲ್ಲಿ ಅವರಿಗೆ ಯಾವುದೇ ರೀತಿಯಾದಂತಹ ಎಕ್ಸಿಕ್ಯೂಟಿವ್ ಪವರ್ಸ್ ಇಲ್ಲ. ಅಧಿಕಾರ ವಿಕೇಂದ್ರೀಕರಣ ಅಂತ ಹೇಳಿದರೆ ಜನತೆಯ ಕೈಗೆ ಅಧಿಕಾರವನ್ನು ಕೊಡತಕ್ಕಂಥಾದ್ದು ಮೂಲತಹ ಗ್ರಾಮ ಪಂಚಾಯಿತಿಯು ವ್ಯವಸ್ಥೆ ಅಥವಾ ಗ್ರಾಮಸ್ವರಾಜ್ಯ ಎನ್ನತಕ್ಕಂಥಾದ್ದನ್ನು ಏನು ತರಬೇಕು ಅಂತ ತಾವು ಹೊರಟಿದ್ದೀರಿ, ಅಂದರೆ ಜನರೇ ತಮ್ಮ ಅಧಿಕಾರವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳತಕ್ಕಂಥಾದ್ದು ನೇರವಾಗಿ ಜನತೆಯ ಹತ್ತಿರವೇ ಅಧಿಕಾರ ಇರತಕ್ಕಂಥಾದ್ದು ಗ್ರಾಮ ಪಂಚಾಯಿತಿ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿ ಎರಡೂ ಮೇಲಿನ ಸಮಿತಿಗಳು ಆಗುತ್ತವೆ. ನೇರವಾಗಿ ಜನರ ಜೊತೆಯಲ್ಲಿ ಸಂಪರ್ಕ ಇರತಕ್ಕಂಥ ನೇರವಾಗಿ ಜನರಿಗೆ ಸ್ಪಂದಿಸತಕ್ಕಂಥ ಶಕ್ತಿ ಮತ್ತು ವಸ್ತು ಸ್ಥಿತಿ ಅರ್ಥವಾಗತಕ್ಕಂಥಾದ್ದು ಗ್ರಾಮ ಪಂಚಾಯಿತಿಗೆ. ವಿಕೇಂದ್ರಿಕರಣ ಮತ್ತು ಗ್ರಾಮ ಸ್ವರಾಜ್ಯ ಇವೆರಡು ತತ್ವಗಳನ್ನು ಅನುಷ್ಠಾನಗೊಳಿಸತಕ್ಕಂಥ ಸಂದರ್ಭದಲ್ಲಿ ಆ ಗ್ರಾಮಪಂಚಾಯಿತಿಗಳಿಗೆ ಏನೂ ಅಧಿಕಾರವನ್ನು ನೀವು ಇಲ್ಲಿ ಕೊಟ್ಟಿಲ್ಲ. ಇದರಲ್ಲಿ ಅವರ ಬಗ್ಗೆ ಪ್ರಸ್ತಾಪವೇ ಇಲ್ಲ. ಗ್ರಾಮ ಪಂಚಾಯಿತಿಗಳ ಅವಶ್ಯಕತೆ ಇದೆಯೋ ಇಲ್ಲವೇ ಎನ್ನತಕ್ಕಂಥ ಅನುಮಾನ ನನಗೆ ವೈಯಕ್ತಿಕವಾಗಿ ಬರುತ್ತಿದೆ. ಇದು ಇದರ ವ್ಯಾಪ್ತಿಗೆ ಮೀರಿದಂತಹ ಅಂಶ ಅಂತ ತಾವು ಹೇಳಬಹುದು. ಗ್ರಾಮಪಂಚಾಯಿತಿಯ ಆಕ್ಟ್‌ನಲ್ಲಿ ಯಾವುದೇ ಫಲಾನುಭವಿಗಳನ್ನು ಗುರುತಿಸತಕ್ಕಂಥಾದ್ದು. ಗ್ರಾಮಪಂಚಾಯಿತಿಯ ಮೂಲಕ ಗ್ರಾಮ ಪಂಚಾಯಿತಿ ಅಂತ ಇದೆ. ಇದು ಏನಾಗಿದೆ ಅಂತ ಹೇಳಿದರೆ ಗ್ರಾಮ ಪಂಚಾಯಿತಿಯ ಮೂಲ ತತ್ವ ಅಡಗಿರತಕ್ಕಂಥಾದ್ದು ಇಲ್ಲಿ. ವಿಕೇಂದ್ರಿಕರಣದ ಮೂಲತ ತತ್ವ ಅಂದರೆ ಏನು ಗ್ರಾಮ ಸಭೆಗಳನ್ನು ನೀವು ಎಲ್ಲಿಯವರೆಗೂ ವ್ಯಾನಡೇಟರಿ ಮಾಡುವುದಿಲ್ಲವೋ ಅಲ್ಲಿಯವರೆಗೂ ನಿಜವಾಗಿಯೂ ಜನರಿಗೆ ಅಧಿಕಾರವನ್ನು ಕೊಡುತ್ತೇವೆಂದು ಹೇಳತಕ್ಕಂಥಾದ್ದು ಆಗಲಿ ಅಥವಾ ಕೊಟ್ಟಿದ್ದೇವೆಂದು ಹೇಳತಕ್ಕಂಥಾದ್ದು ಆಗಲಿ ಅದರಲ್ಲಿ ಅರ್ಥ ಏನೂ ಉಳಿಯುವುದಿಲ್ಲ. ಅದ್ದರಿಂದ ಇದರ ಬಗ್ಗೆ ಗ್ರಾಮ ಪಂಚಾಯಿತಿಗಳಿಗೆ ನೀವು ಕೊಡತಕ್ಕಂಥಾ ಅಧಿಕಾರ ಏನು? ಅವು ಇವತ್ತು ಸಂಪೂರ್ಣವಾಗಿ ನಿಷ್ಕ್ರಿಯವಾಗಿವೆ. ಈ ಬಿಲ್ ಕಾನೂನು ಆಗಿ ಹೋಗುತ್ತದೆ ಏಕೆಂದರೆ ನಿಮಗೆ ಮೆಜಾರಿಟಿ ಇದೆ ಕಾನೂನು ಆಗಿ ತೆಗೆದುಕೊಂಡು ಹೋಗುತ್ತೀರಿ. ಅವರಿಗೆ ಅಧಿಕಾರ ಕೊಡಲಿಕ್ಕೆ ನಮ್ಮ ವಿರೋಧ ಏನೂ ಇಲ್ಲ. ಆದರೆ ಇದು ಹೋದ ಮೇಲೆ ಗ್ರಾಮ ಪಂಚಾಯಿತಿಗಳು ಸಂಪೂರ್ಣವಾಗಿ ನಿಷ್ಕ್ರಿಯವಾಗುತ್ತವೆ. ಅಧಿಕಾರ ವಿಕೇಂದ್ರಿಕರಣ ಮತ್ತು ಗ್ರಾಮಸ್ವರಾಜ್ಯದ ಮೂಲ ತತ್ವ ಏನು ಇದೆ ಅದಕ್ಕೆ ಸಂಪೂರ್ಣವಾಗಿ ಕೊಡಲಿ ಪೆಟ್ಟು ಬೀಳುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ,

ಸರ್ಕಾರ ಇದನ್ನು ಸ್ಪಷ್ಟಪಡಿಸಬೇಕು. ಎರಡನೆಯದು ತಾಲ್ಲೂಕು ಪಂಚಾಯಿತಿಗಳಲ್ಲಿ ಶಾಸಕರ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಸ್ಥಾನ ಏನು? ಜಿಲ್ಲಾ ಪಂಚಾಯಿತಿಗಳಲ್ಲಿ ಶಾಸಕರ ಸ್ಥಾನ ಏನು ಅಂತ. ನಿಗಧಿ ಮಾಡಿದ್ದೀರಿ. ಆದರೆ ತಾಲ್ಲೂಕು ಪಂಚಾಯಿತಿಗಳಲ್ಲಿ ಅವರ ಪರಿಸ್ಥಿತಿ ಏನು? ಏಕೆಂದರೆ ಜಿಲ್ಲಾಪಂಚಾಯಿತಿ ಸದಸ್ಯರು ಮತ್ತು ಶಾಸಕರು. ಆ ಕ್ಷೇತ್ರದಲ್ಲಿ ಆಯ್ಕೆಯಾಗಿರತಕ್ಕಂಥವರು. ಅವರಿಗೆ ಅಲ್ಲಿ ಏನೂ ಸ್ಥಾನ ಇಲ್ಲ ಅಂತ ಹೇಳಿದಾಗ, ಶಾಸಕರಿಗೆ ಅಲ್ಲಿ ಮೂರು ಕಾಸಿನ ಬೆಲೆ ಇರುವುದಿಲ್ಲ ಅವರನ್ನು ಯಾರೂ ಕೇಳತಕ್ಕಂಥ ಪ್ರಶ್ನೆ ಇರುವುದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ ಈಗತಾನೇ ಸ್ವರಾಜ್ಯ ಗ್ರಾಮಸಭೆ ಅಧಿಕಾರದ ವಿಕೇಂದ್ರೀಕರಣದ ಮೂಲ ತತ್ವದ ಮೇಲೆ ಮಾತನಾಡಿ ಈಗ ಶಾಸಕರಿಗೆ ಅಲ್ಲಿ ಮೂರು ಕಾಸಿನ ಬೆಲೆ ಇಲ್ಲ ಅಂತ ಹೇಳಿ ಅಧಿಕಾರ ಕೊಡಿ ಅಂತ ಹೇಳುವುದು ಯಾವ ನ್ಯಾಯ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ನಾನು ಹೇಳತಕ್ಕಂಥಾದ್ದು ಅದು ಅಲ್ಲ. ಜಿಲ್ಲಾ ಪಂಚಾಯಿತಿಯಲ್ಲಿ ಅವರು ಸದಸ್ಯರು ಅಂದರೆ...

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ ತಾತ್ವಿಕವಾದ ಬದ್ಧತೆ ಮತ್ತು ವ್ಯವಹಾರಿಕವಾದ ಸ್ಪಷ್ಟತೆ ಇರುವುದಿಲ್ಲ ಆದ್ದರಿಂದ ಈ ಗೊಂದಲದಲ್ಲಿ ಒಳಗಾಗುತ್ತೀರಿ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ನಮಗೆ ಗೊಂದಲ ಇಲ್ಲ. ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ನೀವು 159ರಲ್ಲಿ ಏನು ಹೇಳಿದ್ದೀರಿ. ಶಾಸಕರನ್ನು, ಲೋಕಸಭಾ ಸದಸ್ಯರನ್ನು ಜಿಲ್ಲಾ ಪಂಚಾಯಿತಿ ಸದಸ್ಯರು ಎಂದು ನೀವು ಇಲ್ಲಿ ಹೇಳಿದ್ದೀರಿ. ತಾಲ್ಲೂಕು ಪಂಚಾಯಿತಿಯಲ್ಲಿ ಅಧಿಕಾರದ ಪ್ರಶ್ನೆ ಅಲ್ಲ. ತಾಲ್ಲೂಕು ಪಂಚಾಯಿತಿಗಳಲ್ಲಿ ಶಾಸಕರು ಸದಸ್ಯರೋ ಅಲ್ಲವೋ? ಜಿಲ್ಲಾ ಪರಿಷತ್ತಿನ ಸದಸ್ಯರು ಸದಸ್ಯರೋ ಅಲ್ಲವೋ? ಅದನ್ನು ನೀವು ಸ್ಪಷ್ಟಮಾಡಿ ಅಂತ ನಾನು ಕೇಳುತ್ತಿರುವುದು. ಶಾಸಕರಿಗೆ ತಾಲ್ಲೂಕು ಪಂಚಾಯಿತಿ ಅಧಿಕಾರ ಕಿತ್ತು ಕೊಟ್ಟು ಬಿಡಿಅಂತ ನಾನು ಇಲ್ಲಿ ಹೇಳುತ್ತಿಲ್ಲ. ಜಿಲ್ಲಾ ಪಂಚಾಯಿತಿಗಳಲ್ಲಿ ಅವರನ್ನು ಸದಸ್ಯರು ಅಂತ ಡಿಕ್ಲೇರ್ ಮಾಡಿದ್ದೀರಿ. ತಾಲ್ಲೂಕು ಪಂಚಾಯಿತಿಗಳ್ಳಿ ಅವರು ಏನು? ತಾಲ್ಲೂಕು ಪಂಚಾಯತಿಗಳಲ್ಲಿ ಅವರಿಗೆ ವೋಟಿಂಗ್ ಪವರ್ಸ್ ಉಂಟಾ? ಸದಸ್ಯರಾ? ಅಷ್ಟೇ ನನಗೆ ಬೇಕಾಗಿರುವುದು. ಅವರು ಜಿಲ್ಲಾ ಪಂಚಾಯತಿಗಳಲ್ಲಿ ಮಾತ್ರ ಅವರು ಸದಸ್ಯರು. ನಾನು ಸಹ ಸೀಮಿತವಾಗಿರತಕ್ಕಂಥಾದ್ದನ್ನೇ ಹೇಳುತ್ತಿರುವುದು. 159ರಲ್ಲಿ ನೀವು ಸ್ಪಷ್ಟಪಡಿಸಿದ್ದೀರಿ. ಲೋಕಸಭಾ ಸದಸ್ಯರು ಶಾಸಕರು ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ರಾಜ್ಯ ಸಭಾ ಸದಸ್ಯರು ಅಲ್ಲಿ ಸದಸ್ಯರು ಅಂತ ತಾವು ಹೇಳಿದ್ದೀರಿ. ತಾಲ್ಲೂಕು ಪಂಚಾಯಿತಿಗಳಲ್ಲಿ ಶಾಸಕರು ಸಹ ಆ ಕ್ಷೇತ್ರದಲ್ಲಿ ಆಯ್ಕೆಯಾಗಿರುತ್ತಾರೆ. ಜಿಲ್ಲಾ ಪಂಚಾಯಿತಿ ಸದಸ್ಯರು ಸಹ ಆ ಕ್ಷೇತ್ರದಲ್ಲಿ ಆಯ್ಕೆ ಆಗಿರುತ್ತಾರೆ. ಆಗ ಅವರ ಪರಿಸ್ಥಿತಿ ಏನು? ತಾಲ್ಲೂಕು ಪಂಚಾಯತಿಗಳಲ್ಲಿ ಅವರ ಸ್ಥಾನಮಾನ ಏನು.

ಡಾ: ಬಿ. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ ಕೆಲವು ತಾಲ್ಲೂಕು ಅಧ್ಯಕ್ಷರು ಅವರನ್ನು [illegible]

ಹಾಕಿದ್ದಾರೆ. ಅವರ ಬಗ್ಗೆ ಕ್ಲಾರಿಫೈ ಮಾಡಬೇಕು ಬಿಟ್ಟಿದ್ದರು ಒಂದೊಂದು ರೀತಿ ಹಾಕಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಜಿಲ್ಲಾ ಪಂಚಾಯತಿಗಳಲ್ಲಿ ಅವರು ಏಕೆ ಸದಸ್ಯರಾಗಿರಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಅವರು ತಾಲ್ಲೂಕು ಪಂಚಾಯತಿ ಸದಸ್ಯರಾಗಿರುತ್ತಾರೆ. ಅರ್ಬನ್ ಏರಿಯಾದಿಂದ ಆದಂತಹವರು ಮಾತ್ರ ಇರುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಇದು ಆಕ್ಟ್‌ನಲ್ಲಿ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಇದೇ ನಾನು ತೋರಿಸುತ್ತೇನೆ. ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜಿಲ್ಲಾ ಪಂಚಾಯತಿ ಸದಸ್ಯರನ್ನು ತಾಲ್ಲೂಕು ಪಂಚಾಯತಿ ಸಭೆಗಳಿಗೆ ಕರೆಯುವುದಿಲ್ಲ. ಅವರು ಸದಸ್ಯರು ಅಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ತಾವು ಶಾಸಕರ ಬಗ್ಗೆ ಮಾತನಾಡುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಾ ನಾನು ಎರಡೂ ಹೇಳುತ್ತಿದ್ದೇನೆ.

ಶ್ರೀ ಯು.ಬಿ. ಬಣಕಾರ್ : ಈಗ ಇರುವಂತಹ ಕಾಯ್ದೆಯಲ್ಲಿ ತಾಲ್ಲೂಕು ಪಂಚಾಯತಿಗಳಲ್ಲಿ ಸಮಿತಿ ಸದಸ್ಯರಾಗಿ ಶಾಸಕರು ಇದ್ದಾರೆ, ಆದರೆ ಮತದಾನದ ಅಧಿಕಾರ ಇಲ್ಲಿ ಅವರಿಗೆ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ ಅವರು ಗೊಂದಲದಲ್ಲಿ ಬೀಳುವುದರ ಜೊತೆಗೆ ಸದನವನ್ನು ಗೊಂದಲದಲ್ಲಿ ಬೀಳಿಸುತ್ತಿದ್ದಾರೆ. ಜಿಲ್ಲಾಪಂಚಾಯತಿ ಸದಸ್ಯರು ತಾಲ್ಲೂಕು ಪಂಚಾಯತಿ ಸದಸ್ಯರು ಅಲ್ಲ ಎನ್ನುವುದು ವಾಸ್ತವಾಂಶ. ಆದರೆ ಶಾಸಕರಾಗಿ ಇರುವಂತಹವರು ತಾಲ್ಲೂಕು ಪಂಚಾಯತಿ ಸದಸ್ಯರು ಆಗಿರುತ್ತಾರೆ. ನಗರ ಪ್ರದೇಶದಿಂದ ಆಯ್ಕೆಯಾಗಿ ಬಂದಿರತಕ್ಕಂಥವರು ಮಾತ್ರ ಇಲ್ಲ. ಇಷ್ಟೇ ವ್ಯತ್ಯಾಸ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಗೊಂದಲ ಏನೂ ಇಲ್ಲ. ಸದಸ್ಯರು, ಜಿಲ್ಲಾ ಪಂಚಾಯತಿಯಲ್ಲಿ ವೋಟಿಂಗ್ ಪವರ್ಸ್ ಕೊಟ್ಟರೆ ತಾಲ್ಲೂಕು ಪಂಚಾಯತಿಗಳಲ್ಲಿ ಅವರಿಗೆ ವೋಟಿಂಗ್ ಪವರ್ಸ್ ಕೊಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ವೋಟಿಂಗ್ ಪವರ್ಸ್ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರಿಗೆ?

ಶ್ರೀ ಎಂ. ಪಿ. ಪ್ರಕಾಶ್ : ಶಾಸಕರಿಗೆ ತಾಲ್ಲೂಕು ಪಂಚಾಯತಿಯಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಸಾಮಾನ್ಯ ನಡವಳಿಕೆಗಳಲ್ಲಿ ಅವರಿಗೆ ಮತ ಚಲಾವಣೆ ಮಾಡುವ ಅಧಿಕಾರ ಇದೆ.

ಶ್ರೀ ಯು.ಬಿ. ಬಣಕಾರ್ : ಮತ ಚಲಾವಣೆ ಅಧಿಕಾರ ಕೊಟ್ಟಿಲ್ಲ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ನಾನು ಅವರಲ್ಲಿ ಮನವಿ ಮಾಡುತ್ತಿದ್ದೇನೆ.. ಇನ್ನೊಂದು ಸಲ ಮಾಹಿತಿ ತೆಗೆದುಕೊಂಡು ಬಂದು ಮಾನ್ಯ ಮಂತ್ರಿಗಳು ಹೇಳಿದರೆ ಒಳ್ಳೆಯದು. ಅವರನ್ನು ಇನ್ವೈಟ್ ಮಾಡುವುದು ಬಿಡುವುದು ಅವರ ವಿವೇಚನೆಗೆ ಬಿಟ್ಟಂತಹ ವಿಷಯ. ಅವರ ಜಿಲ್ಲಾ ಪಂಚಾಯತಿ ಸದಸ್ಯರನ್ನು ಆ ತಾಲ್ಲೂಕು ವ್ಯಾಪ್ತಿಯಲ್ಲಿ ಬರತಕ್ಕಂಥ ಜಿಲ್ಲಾ ಪಂಚಾಯತಿ ಸದಸ್ಯರು ತಾಲ್ಲೂಕು ಪಂಚಾಯತಿಗಳಲ್ಲಿ ಸದಸ್ಯರಾಗುವುದಕ್ಕೆ ಅರ್ಹತೆ ಇದೆಯೇ? ನಾನು ಅದನ್ನೇ ಹೇಳುತ್ತಿರುವುದು.

ಶ್ರೀ ಎಂ. ಪಿ. ಪ್ರಕಾಶ್ : ಅದು ಇಲ್ಲ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಅವರು ಕನಫ್ಯೂಜ್ ಮಾಡಿಕೊಂಡರೆ ನಾನು ಏನು ಮಾಡಲಿ. ಶಾಸಕರನ್ನು ಸಭೆಗಳಿಗೆ ಕರೆಯುತ್ತಾರೆ. ಅವರಿಗೆ ವೋಟಿಂಗ್ ಪವರ್ಸ್ ಇದೆಯೇ ಇಲ್ಲವೇ ಎನ್ನತಕ್ಕಂಥ ಪ್ರಶ್ನೆ. ನನಗ ಗೊತ್ತಿರುವ ಪ್ರಕಾರ ವೋಟಿಂಗ್ ಪವರ್ಸ್ ಇಲ್ಲ. ಜಿಲ್ಲಾ ಪಂಚಾಯತಿ ಸದಸ್ಯರನ್ನು ಮೀಟಿಂಗಗೆ ಕರೆಯುವುದಿಲ್ಲ ಅವರು ಸದಸ್ಯರು ಅಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಜಿಲ್ಲಾ ಪಂಚಾಯತಿ ಸದಸ್ಯರು ತಾಲ್ಲೂಕು ಪಂಚಾಯತಿ ಸದಸ್ಯರು ಅಲ್ಲ.

ಶ್ರೀ ಜಿ.ಪಿ. ಶ್ರೀರಾಮರೆಡ್ಡಿ : ನಾನು ಶಾಸಕರ ಬಗ್ಗೆಯೂ ಹೇಳುತ್ತಿದ್ದೇನೆ. ಶಾಸಕರಿಗೆ ಮೀಟಿಂಗ್ ಕರೆಯುತ್ತಾರೆ ವೋಟಿಂಗ್ ಪವರ್ಸ್ ಇದೆಯೇ? ನನಗೆ ಗೊತ್ತಿರುವ ಹಾಗೆ ಇಲ್ಲ. ನನಗೇನೂ ಗೊಂದಲ ಇಲ್ಲ. ಎರಡನೇಯದಾಗಿ ಜಿಲ್ಲಾ ಪಂಚಾಯತಿ ಸದಸ್ಯರನ್ನು ಮೀಟಿಂಗಗೂ ಕರೆಯುವುದಿಲ್ಲ. ಅವರು ಸದಸ್ಯರು ಅಲ್ಲವೇ? ಇಲ್ಲದಿದ್ದರೆ ಅವರ ಬಗ್ಗೆ ಇದರಲ್ಲಿ ಏನಾದರೂ ತಿದ್ದುಪಡಿ ಇದರಲ್ಲಿ ತರುತ್ತೀರೋ? ತಂದು ಅವರನ್ನು ಸದಸ್ಯರನ್ನಾಗಿ ಮಾಡಬೇಕು. ಏಕೆಂದರೆ ಶಾಸಕರನ್ನು ಜಿಲ್ಲಾ ಪಂಚಾಯತಿ ಸದಸ್ಯರನ್ನಾಗಿ ಮಾಡುವಾಗ ಜಿಲ್ಲಾ ಪಂಚಾಯತಿ ಸದಸ್ಯರನ್ನು ತಾಲ್ಲೂಕು ಪಂಚಾಯತಿ ಸದಸ್ಯರನ್ನಾಗಿ ಮಾಡದೇ ಇರತಕ್ಕಂಥದ್ದು ಸರಿಯಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್ : ತಾಲ್ಲೂಕು ಪಂಚಾಯತಿಗಳಲ್ಲಿಯೂ ಸಹ ಜಿಲ್ಲಾ ಪಂಚಾಯತಿ ಸದಸ್ಯರು ಸದಸ್ಯರಾಗಿ ಇರಬೇಕು ಎನ್ನುವುದು ಅವರ ಅಭಿಪ್ರಾಯ.

ಡಾ: ಯು. ಚಿತ್ತರಂಜನ್ : ಗ್ರಾಮ ಪಂಚಾಯತಿ ಸಭೆಗಳಲ್ಲಿ ತಾಲ್ಲೂಕು ಪಂಚಾಯತಿ ಸದಸ್ಯರುಗಳು ಹೋಗಿ ಕುಳಿತುಕೊಳ್ಳುತ್ತಾರೆ. ಅವರನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ಹೊರಕ್ಕೆ ಹಾಕಿಸುತ್ತಾರೆ. ಅದಕ್ಕೂ ಸ್ವಲ್ಪ ಕ್ಲಾರಿಫೈ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಬಹಳ ಸೀಮಿತವಾಗಿರತಕ್ಕ ವಿಷಯಕ್ಕೆ ಮಾತ್ರ ಈಗ ತಿದ್ದುಪಡಿ ತರಲಾಗಿದೆ. ಗ್ರಾಮ ಪಂಚಾಯತಿ ವ್ಯಾಪ್ತಿ ಬಗ್ಗೆ ಯೋಚನೆ ಮಾಡುವುದಾಗಿದ್ದರೆ, ಆಯಾ ಘಟಕಗಳಲ್ಲಿರತಕ್ಕಂಥ ಅಧಿಕಾರ, ಸ್ವಾಯತ್ತತೆ, ಘನತೆ ಇವುಗಳ ಬಗ್ಗೆಯೂ ನಾವು ಯೋಚನೆ ಮಾಡಬೇಕಾಗುತ್ತದೆ. ಗ್ರಾಮ ಪಂಚಾಯತಿಗಳಿಗೆ ಬೇರೆಯವರು ಸದಸ್ಯರಾಗಿ ಹೋಗುವುದರಿಂದ

ಅವರು ನಿರ್ಧಾರದಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸಮಗ್ರವಾದ ತಿದ್ದುಪಡಿ ತಂದಾಗ ವ್ಯಾಪಕವಾದಂಥ ಚರ್ಚೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಸೀಮಿತವಾಗಿ ತಂದಿರತಕ್ಕಂಥ ತಿದ್ದುಪಡಿ ಮೇಲೆ ಎಲ್ಲಾ ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಸೆಕ್ಷನ್ 159ಗೆ ತಿದ್ದುಪಡಿ ತರಲಾಗಿದೆ. ಸೆಕ್ಷನ್ 159ನಲ್ಲಿ ಏನಿದೆ?

``Section 159 : Constitution of Zilla Panchayat : (1) Every Zilla Panchayat shall consist of,-... (ii) the members of the House of people and the members of the State Legislative Assembly representing a part or whole of the district whose constituencies lie within the district; (iii) the members of the Council of state and the members of the State Legislative Council who are registered as elections within the district, and.."

ಅಂದಾಗ ಕಾನ್ಸ್ಟಿಟ್ಯೂಷನ್ ಆಫ್ ಜಿಲ್ಲಾ ಪರಿಷತ್ ಹೇಗಿರಬೇಕೆಂದು ಅಮೆಂಡ್‌ಮೆಂಟ್ ಬಂದಾಗ, naturally he is talking about the composition of Zilla Panchayat and Taluk Panchayats. ಅವರು ಹೇಳುವುದಿಷ್ಟೇ, ಜಿಲ್ಲಾ ಪರಿಷತ್ತಿನ ಸದಸ್ಯರೇನಿದ್ದಾರೆ ಅವರೂ ಸಹ ಎಂ.ಎಲ್.ಎ.ಗಳ ತರಹ ಅದೇ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುತ್ತಾರೆ. ಎಂ.ಎಲ್.ಎ.ಗಳಿಗೆ ಯಾವ ರೀತಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ರೆಪ್ರೆಸೆಂಟ್ ಮಾಡುವುದಕ್ಕೆ ಅವಕಾಶ ಇದೆಯೋ, ಅದೇ ರೀತಿ ಜಿಲ್ಲಾ ಪಂಚಾಯತ್ ಸದಸ್ಯರುಗಳೂ ತಾಲ್ಲೂಕು ಪಂಚಾಯತಿಯಲ್ಲಿ ರೆಪ್ರೆಸೆಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಈ ಜಿಲ್ಲಾ ಪಂಚಾಯತ್ ಕಾಯಿದೆಗೆ ಸಮಗ್ರವಾದ ತಿದ್ದುಪಡಿ ತರಬೇಕೆನ್ನುವ ಉದ್ದೇಶದಿಂದ ಒಂದು ಪರಿಣಿತರ ಸಮಿತಿಯನ್ನು ಮಾಡಲಾಗಿದೆ. ಸಮಿತಿಯವರು ಇನ್ನೊಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ವರದಿ ಕೊಡಬಹುದು. ಸಮಿತಿಯನ್ನು ನೇಮಕ ಮಾಡಿ ಅದು ವರದಿ ಕೊಡುವುದರೊಳಗೆ ತಿದ್ದುಪಡಿಗಳನ್ನು ತಂದರೆ, ಸಮಿತಿಗೆ ಗೌರವ ಇಲ್ಲದ ಹಾಗಾಗುತ್ತದೆ. ಅದಕ್ಕಾಗಿ ವರದಿ ಬಂದ ನಂತರ ಸಮಗ್ರವಾಗಿ ತಿದ್ದುಪಡಿ ತರಲಾಗುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಜಿಲ್ಲಾ ಪಂಚಾಯತಿ ಸದಸ್ಯರು ತಾಲ್ಲೂಕು ಪಂಚಾಯತಿ ಸದಸ್ಯರಾಗಿ ಇರಬೇಕಾಗುತ್ತದೆ. ತಾಲ್ಲೂಕು ಪಂಚಾಯತಿ ವತಿಯಿಂದ ರಸ್ತೆ, ಸೇತುವೆ, ಕುಡಿಯುವ ನೀರು, ಮನೆಗಳ ಹಂಚಿಕೆ ಹೀಗೆ ಅತ್ಯಂತ ಜವಾಬ್ದಾರಿಯುತ ಕೆಲಸಗಳನ್ನು ಮಾಡುವಾಗ 40 ಸಾವಿರ ಮತದಾರರ ಪ್ರತಿನಿಧಿಯಾಗಿರುವ ಜಿಲ್ಲಾ ಪರಿಷತ್ತಿನ ಸದಸ್ಯನಿಗೂ ಜವಾಬ್ದಾರಿಗಳಿರುತ್ತಾವೆ. ಆ ಕಾರಣಕ್ಕಾಗಿ ಆ ತಿದ್ದುಪಡಿಯನ್ನು ತರಬೇಕೆನ್ನುವುದು ಸರ್ಕಾರದ ಅಭೀಷ್ಟೆ ಕೂಡಾ ಇದೆ. ಅದಕ್ಕಾಗಿ ಪರಿಣಿತರ ಸಮಿತಿ ವರದಿ ಬರಲಿ ಎಂದು ಕಾಯುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ತಿದ್ದುಪಡಿಗೆ ಸರ್ಕಾರ ಆರ್ಡಿನೆನ್ಸ್ ಮಾಡಿದಾಗ ಇದಕ್ಕೂ ಆರ್ಡಿನೆನ್ಸ್ ಮಾಡಬಹುದಾಗಿತ್ತು, ಅಥವಾ ಪರಿಣಿತರ ಸಮಿತಿ ವರದಿ ಬಂದ ನಂತರವೇ ಇದಕ್ಕೂ ಆರ್ಡಿನೆನ್ಸ್ ಹೊರಡಿಸಬಹುದಾಗಿತ್ತು. ಈ ಅಂಶಗಳನ್ನೆಲ್ಲಾ ಸ್ಪಷ್ಟವಾಗಿ ಸರ್ಕಾರ ತಿಳಿಸಬೇಕು. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳಿಗೆ ಅಧಿಕಾರಿಗಳ ಮೇಲೆ ಯಾವ ತರಹ ನಿಯಂತ್ರಣ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದೂ ಇದರಲ್ಲಿ ಸ್ಪಷ್ಟಪಡಿಸಬೇಕು.

ಶ್ರೀ ಸಿ.ಎಂ. ಉದಾಸಿ : ಜಿಲ್ಲಾ ಪರಿಷತ್ತಿನ ಸದಸ್ಯರುಗಳಿಗೆ ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ ಭಾಗವಹಿಸಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ, ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಡಬೇಕೆಂಬ ಬೇಡಿಕೆಯೂ ಬರಬಹುದು. ಈಗಿನ ಸಂದರ್ಭದಲ್ಲಿ ಒಂದು ಎರಡು ಮತಗಳ ಅಂತರದಲ್ಲಿ ನಡೆಯುತ್ತಿರುವ ಸಭೆಗಳಲ್ಲಿ ಬೇರೆಯವರಿಗೂ ಮತದಾನದ ಹಕ್ಕು ಪ್ರಾಪ್ತಿಯಾದರೆ, ಸಮಸ್ಯೆ ಉದ್ಭವವಾಗುತ್ತದೆಂದು ತಿಳಿಸುತ್ತಿದ್ದೇನೆ. ಇದಕ್ಕೆ ಮಾನ್ಯ ಮಂತ್ರಿಯವರು ಏನು ಮಾಡುತ್ತಾರೆಂದು ತಿಳಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಜಿಲ್ಲಾ ಪಂಚಾಯಿತಿ ಸಭೆಗೆ ಬರುವುದಕ್ಕೆ ಅವಕಾಶವಿಲ್ಲ. ಈ ರೀತಿ ಜಿಲ್ಲಾ ಪಂಚಾಯಿತಿ ಸದಸ್ಯರು ತಾಲ್ಲೂಕು ಪಂಚಾಯಿತಿ ಸಭೆಗೆ ಬರುವುದಕ್ಕೆ ಅವಕಾಶವಿಲ್ಲ. ಈ ರೀತಿ ಜಿಲ್ಲಾ ಪರಿಷತ್ತಿನ ಸದಸ್ಯರುಗಳಿಗೆ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳಿಗೆ ಹಕ್ಕನ್ನು ಕೊಟ್ಟರೆ ಒಂದೆರಡು ಮತಗಳ ಅಂತರದಲ್ಲಿ ನಡೆಯುತ್ತಿರುವ ಸಭೆಗಳಲ್ಲಿ ಸಮಸ್ಯೆ ಉಂಟಾಗುತ್ತದೆಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, 1978ರಲ್ಲಿ ತಾಲ್ಲೂಕು ಬೋರ್ಡ್ ಚುನಾವಣೆ ನಡೆದಾಗ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 4 ಜನ ಗೆದ್ದ ಪಕ್ಷಕ್ಕೆ ಅಧ್ಯಕ್ಷ ಸ್ಥಾನ ಸಿಕ್ತು. 14 ಜನ ಗೆದ್ದಿದ್ದವರಿಗೆ ಸಿಕ್ಕಲಿಲ್ಲ. ಏಕೆಂದರೆ, ಬೆಂಗಳೂರು ಸುತ್ತಮುತ್ತ ಗೆದ್ದಿದ್ದಂಥ ಟೀಚರ್ಸ್ ಕಾನ್ಸಿಟ್ಯೂಯೆನ್ಸಿ ಎಂ.ಎಲ್.ಸಿ.ಗಳು ಇಲ್ಲೇ ರಿಜಿಸ್ಟರ್ ಮಾಡಿಸಿಬಿಟ್ಟಿದ್ದರು. ಈ ಎಕ್ಸ್ ಅಫಿಷಿಯೋ ಮೆಂಬರ್ಸ್ ಎಲೆಕ್ಟೆಡ್ ಮೆಂಬರ್ಸನ್ನು ಬೀಟ್ ನಂಬರ್ ಮಾಡಿಬಿಟ್ಟು ಅವರು ಅಧ್ಯಕ್ಷರಾಗಿಬಿಟ್ಟರು. That is the irony of democracy.

SRI M.P. PRAKASH : We have got to live with certain anomalies of this nature which we call them as legislative anomalies.

ಶ್ರೀ ಬಿ. ಶಿವರಾಮು : ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳ ಪೈಕಿ ಕೂಡ, ತಾಲ್ಲೂಕು ಪಂಚಾಯಿತಿಯ ಸದಸ್ಯರು ಮೂರನೇ ಒಂದು ಭಾಗದಷ್ಟು ಬರುತ್ತಿದ್ದಾರೆ. ಅವರು ಅಲ್ಲೇ ಅವರ ಸಮಸ್ಯೆಗಳನ್ನು ಹೇಳುವುದಕ್ಕೆ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಜಿಲ್ಲಾ ಪಂಚಾಯಿತಿ ಸಭೆಗೆ ಹೋಗುವ ಅವಕಾಶವಿರುವುದರಿಂದ, ಮತ್ತೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳನ್ನು ತಾಲ್ಲೂಕು ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿ ಸದಸ್ಯರುಗಳನ್ನು ಗ್ರಾಮ ಪಂಚಾಯಿತಿಗೆ ಹಾಕುವುದರಿಂದ

ಸುಮ್ಮನೆ ಗೊಂದಲಕ್ಕೆ ಕಾರಣವಾಗುತ್ತದೆ.

+ ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮೂಲಭೂತವಾಗಿ ಒಂದು ದೊಡ್ಡ ಗೊಂದಲದಲ್ಲಿ ಆ ಆಕ್ಟ್ ಇದೆ. ಈ ಮೊದಲು ಮಾನ್ಯ ನಜೀರ್ ಸಾಬ್‌ರವರ ಕಾಲದಲ್ಲಿ ತಂದಿದ್ದಂಥ ಆಕ್ಟ್‌ನಲ್ಲಿ ಇಷ್ಟೊಂದು ಗೊಂದಲವಿರಲಿಲ್ಲ, ಅದನ್ನೇ ಸ್ವಲ್ಪ ಬದಲಾವಣೆ ಮಾಡಿಕೊಂಡು ಮಾಡಿದ್ದಿದ್ದರೆ, ಇಷ್ಟೊಂದು ಗೊಂದಲ ನಿರ್ಮಾಣವಾಗುತ್ತಿರಲಿಲ್ಲ.

ಅಧ್ಯಕ್ಷರು : ಆಗ ಕಮಿಟಮೆಂಟ್ ಕಾಣಿಸುತ್ತಿತ್ತೆಂದು ತಾವು ಹೇಳುವುದು.

ಶ್ರೀ ಆರಗ ಜ್ಞಾನೇಂದ್ರ : ಹೌದು. ತಡವಾಗಿಯಾದರೂ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಅಧಿಕಾರ ಕೊಡುವ ಅಮೆಂಡ್‌ಮೆಂಟನ್ನು ತಂದಿದ್ದೀರಿ. ಇದನ್ನು ಜಾರಿಗೊಳಿಸುವ ಮೊದಲು ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಯೋಗ್ಯವಾದ ತರಬೇತಿಯನ್ನು ಕೊಡಬೇಕು. ಎಲ್ಲಾ ಸದಸ್ಯರು ಹಾಗೇ ಇರುತ್ತಾರೆಂದಲ್ಲ. ಕೆಲವರಿಗೆ ಅಧಿಕಾರವನ್ನು ಚಲಾಯಿಸುವುದಕ್ಕೆ ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಿಸ್ತೂಲು ಹಿಡಿದುಕೊಂಡು ಕಳ್ಳನನ್ನು ಓಡಿಹೋಗು ಎಂದು ಹೇಳಿದಾಗ, ಕಳ್ಳ ಕಲ್ಲನ್ನು ತೆಗೆದುಕೊಂಡು ಪಿಸ್ತೂಲು ಕೆಳಗೆ ಹಾಕದಿದ್ದರೆ ಹೊಡೆಯುತ್ತೇನೆಂದು ಜೋರು ಮಾಡಿದಾಗ ಪಿಸ್ತೂಲನ್ನು ಕೆಳಗೆ ಹಾಕಿದಂಥ ಪರಿಸ್ಥಿತಿ ಉಂಟಾಗಿದೆ. ಪಿಸ್ತೂಲು ಅವರ ಕೈ ಕೊಟ್ಟರೂ ಕೂಡ ಚಲಾಯಿಸುವುದಕ್ಕೆ ಬರದಿದ್ದರೆ ಪ್ರಯೋಜನವಿರುವುದಿಲ್ಲ. ಅದಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಯೋಗ್ಯವಾದ ರೀತಿಯಲ್ಲಿ ತರಬೇತಿ ಕೊಡುವುದು ಅವಶ್ಯಕತೆ ಇದೆ.

ಅಧ್ಯಕ್ಷರು : ಪಿಸ್ತೂಲು ಹೇಗೆ ಇರುತ್ತದೆಂದು ಗೊತ್ತಿಲ್ಲದ ಇರುವವನಿಗೆ ಮೊದಲು ಪಿಸ್ತೂಲು ಕೊಟ್ಟು ತೋರಿಸೋಣ. ನಂತರ ಅವನು ನಿಧಾನವಾಗಿ ಕಲಿತುಕೊಳ್ಳುತ್ತಾನೆ.

ಶ್ರೀ ಆರಗ ಜ್ಞಾನೇಂದ್ರ : ಇನ್ನು ಅಕೌಂಟಬಿಲಿಟಿ ಬಗ್ಗೆ ಹೇಳುವುದಾದರೆ, ಅದು ಯಾರ ಹತ್ತಿರ ಇದೆ ಎಂದು ಗೊತ್ತಾಗುವುದಿಲ್ಲ. ಅಧಿಕಾರಿಗಳೇ ಮೋಸ ಮಾಡಿ ತಿಂದಿರುವ ಹಣವನ್ನು ಎಷ್ಟರ ಮಟ್ಟಿಗೆ ನಾವು ವಸೂಲಿ ಮಾಡಿದ್ದೇವೆ? ನನ್ನ ಕ್ಷೇತ್ರದಲ್ಲೇ ಬಿ.ಡಿ.ಒ. ಮತ್ತು ಜೂನಿಯರ್ ಇಂಜಿನೀಯರ್ ಹರಿಜನರಿಗೆ ಖರ್ಚು ಮಾಡುವ ಹಣದಲ್ಲಿ 15 ಲಕ್ಷ ರೂಪಾಯಿಗಳನ್ನು ತಿಂದು ತೇಗಿದ್ದಾರೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿದಾಗ, ಅವರು ಮಾಡಿದ ತಪ್ಪು ದೃಢಪಟ್ಟಿದೆ. ಆದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳದ ಆ ಬಿ.ಡಿ.ಒ.ಗೆ ಎಕ್ಸಿಕ್ಯುಟಿವ್ ಆಫೀಸರ್ ಆಗಿ ಪ್ರಮೋಷನ್ ಕೊಡಲಾಯಿತು. ಆ ಜೂನಿಯರ್ ಇಂಜಿನೀಯರನ್ನು ಸಸ್ಪೆಂಡ್ ಮಾಡಿಸಿದ್ದು, ಮತ್ತೆ ಯಾರದೋ ಪ್ರಭಾವ ಬೀರಿ ಅವನನ್ನು ರೀ-ಇನ್‌ಸ್ಟೇಟ್ ಮಾಡಿಸಿದರು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುವುದಕ್ಕಾಗಲಿಲ್ಲವೆಂದರೆ ಯಾರಿಗೆ ಅಧಿಕಾರ ಕೊಟ್ಟರೂ ಏನೂ ಆಗುವುದಿಲ್ಲ ಎನ್ನುವ ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ.

ಇಲ್ಲಿ ಪಂಚಾಯತನ ಅಧ್ಯಕ್ಷರು ತಾಲ್ಲೂಕು ಪಂಚಾಯತನ ಸದಸ್ಯರಾಗುತ್ತಾರೆ. ತಾಲ್ಲೂಕು ಪಂಚಾಯತನ ಅಧ್ಯಕ್ಷರು ಜಿಲ್ಲಾಪಂಚಾಯತನ ಸದಸ್ಯರಾಗುತ್ತಾರೆ. ಆದರೆ ಜಿಲ್ಲಾಪಂಚಾಯತನ

ಸದಸ್ಯರು ಏತಕ್ಕೆ ಬೇಡವಾದವರು ಆಗುತ್ತಾರೆ. ಒಟ್ಟಾರೆ ಅಧಿಕಾರ ಅವರಿಗೆ ಇಲ್ಲವೆಂದು ಆಗುವುದಾದರೆ ಜಿಲ್ಲಾ ಪಂಚಾಯತನ್ನು ರದ್ದು ಮಾಡಿ, ಒಂದು ಜಿಲ್ಲಾಬೋರ್ಡ್ ಎಂದು ಏನಿತ್ತು ಎಲ್ಲಾ ತಾಲ್ಲೂಕುಬೋರ್ಡ್ ಅಧ್ಯಕ್ಷರನ್ನು ಸೇರಿಸಿ ಜಿಲ್ಲಾಬೋರ್ಡ್ ಎಂದು ಮಾಡುತ್ತಾ ಇದ್ದರು. ಆ ರೀತಿಯಾಗಿ ಮಾಡಿದರೂ ಕೂಡ ಅಡ್ಡಿ ಇಲ್ಲ. ಈಗ ಜಿಲ್ಲಾಪಂಚಾಯತ್ ಅಧ್ಯಕ್ಷರ ಮುದ್ದೆಯು ಬಿಡಳ ನೋಡ್ತೇವು. ಆದರೆ ಅವರಿಗೆ ಯಾವ ಅಧಿಕಾರವೂ ಇಲ್ಲ. ಅವರು ಒಂದು ತಾಲ್ಲೂಕು ಪಂಚಾಯತನಲ್ಲಿ ಕೂಡುವ ಹಾಗಿಲ್ಲ. ತಾಲ್ಲೂಕಿನ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುವ ಹಾಗಿಲ್ಲ. ಪ್ರತಿ ತಿಂಗಳ ಐದನೇ ತಾರೀಖು 20 ಅಂಶಗಳ ಕಾರ್ಯಕ್ರಮವನ್ನು ರಿವ್ಯೂವ್ ಮಾಡುವ ಒಂದು ಸಭೆಯನ್ನು ತಾಲ್ಲೂಕು ಪಂಚಾಯತನ ಅಧ್ಯಕ್ಷರು ಕರೆಯುತ್ತಾರೆ. ಇದು ನಮ್ಮ ಎಲ್ಲಾ ಅಧಿಕಾರಿಗಳನ್ನು ಸೇರಿಸಿ ಮಾಡುವಂಥ ಒಂದು ಮೀಟಿಂಗ್. ಕನಿಷ್ಟ ಅದಕ್ಕಾದರೂ ಅವರು ಹೋದರೆ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತನ ಮಟ್ಟದಲ್ಲಿ ಆಗಿರತಕ್ಕಂಥ ಚರ್ಚೆಯ ವಿಚಾರಗಳನ್ನು ಅವರಿಗೆ ಹೇಳದಂತಾಗುತ್ತದೆ. ಅಂತೆಯೇ ಅಲ್ಲಿ ಏನು ಚರ್ಚೆಯಾಗಿದೆ ಆ ಬಗ್ಗೆ ಜಿಲ್ಲಾಪಂಚಾಯತನಲ್ಲಿ ಚರ್ಚೆ ಮಾಡಲು ಆಗುತ್ತದೆ. ಮೂರು ತಿಂಗಳಿಗೊಮ್ಮೆ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ 20 ಅಂಶಗಳ ರಿವ್ಯೂವ್ ಸಮಿತಿಯಲ್ಲಿಯೂ ಕೂಡ ಅವರನ್ನು ಸದಸ್ಯರನ್ನಾಗಿ ಮಾಡಿಲ್ಲ. ಬೇರೆ ಯಾರನ್ನೋ ಸರಕಾರದವರು ನಾಮಿನೇಟ್ ಮಾಡುತ್ತಾ ಇದ್ದೀರಿ. ಈ ರೀತಿಯಾಗಿ ಮಾಡಿದರೆ ಇಲ್ಲಿ ಎಲೆಕ್ಟ್ ಆಗುವ ಪ್ರತಿನಿಧಿಗಳಿಗೆ, ನಾವೇ ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ಹೇಳುವಂಥಾದ್ದು, ಮತ್ತು ನಾವೇ ಅವರಿಗೆ ಅಲ್ಲಿ ಕೂರಬೇಡ, ಇಲ್ಲಿ ಕೂಡ ಬೇಡ, ಇಲ್ಲಿ ಬರಬೇಡ ಎಂದು ಹೇಳಿ ಒಂದು ರೀತಿಯಲ್ಲಿ ಮಡಿವಂತಿಕೆಯನ್ನು ತೋರಿಸತಕ್ಕಂಥ ಒಂದು ಭಾವನೆ ನಿರ್ಮಾಣವಾಗುತ್ತದೆ ಎಂದು ನನಗನ್ನಿಸುತ್ತದೆ. ಇನ್ನು ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್‌ನ ಅಧ್ಯಕ್ಷರುಗಳ ಕಾಲಾವಧಿಯನ್ನು ನಿಗದಿ ಮಾಡುತ್ತೇವೆಂದು ತಾವು ಅನೇಕಕಡೆಗಳಲ್ಲಿ ಹೇಳಿದ್ದೀರಿ. ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್‌ನ ಅಧ್ಯಕ್ಷರುಗಳ ಸಮಾವೇಶದಲ್ಲಿಯೂ ಕೂಡ ತಾವು ಮತ್ತು ಮಾನ್ಯ ಮುಖ್ಯಮಂತ್ರಿಯವರೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ ಎನ್ನುವಂಥಾದ್ದನ್ನು ನಾವು ಕೇಳಿದ್ದೇವೆ. ಅದು ಬಹುಶಃ ಈ ತಿದ್ದುಪಡಿಯಲ್ಲಿ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಆ ವಿಚಾರ ಬರಲಿಲ್ಲ.

ಅಧ್ಯಕ್ಷರು : ನೀವು ಹಳೆಜಿಲ್ಲಾಪರಿಷತ್ ಮೆಂಬರ್ ಆಗಿದ್ದೀರಿ ಅಲ್ಲವೆ? 1983ರ ಆಕ್ಟಿಗೆ ಮತ್ತು 1993ರ ಆಕ್ಟಿಗೆ ತುಂಬಾ ವಿಚಾರಗಳಲ್ಲಿರತಕ್ಕಂಥ ಮೂಲಭೂತ ವ್ಯತ್ಯಾಸಗಳನ್ನು ಕಂಡುಕೊಂಡಿದ್ದರೆ, ಅದನ್ನು ಹೇಳಿ. ಗ್ರಾಮಸಭೆ ವಿಚಾರ ಏನೋ ಹೇಳುತ್ತಿದ್ದರು ಅದು ನನಗೆ ಗೊತ್ತಾಗಲಿಲ್ಲ...

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ. ಗ್ರಾಮಸಭೆಗಳನ್ನು 6 ತಿಂಗಳಿಗೊಮ್ಮೆ ಕರೆಯಬೇಕೆಂದು ಅದರಲ್ಲಿಯೂ ಇತ್ತು, ಇದರಲ್ಲಿ ಕೂಡ ಇದೆ. ಅಲ್ಲಿ ಗ್ರಾಮಸಭೆಯನ್ನು ಕರೆಯಬೇಕೆನ್ನುವುದು ಕಡ್ಡಾಯವಾಗಿತ್ತು. ಗ್ರಾಮಸಭೆಯಲ್ಲಿ ಅನೇಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆನ್ನುವುದು ಇತ್ತು. ಐಆರ್‌ಡಿಪಿ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡುತ್ತಾ ಇದ್ದರು. ನಿರುದ್ಯೋಗದ ಫಲಾನುಭವಿಗಳನ್ನು ಅಲ್ಲಿಯೇ ಆಯ್ಕೆ ಮಾಡುತ್ತಾ ಇದ್ದರು...

ಅಧ್ಯಕ್ಷರು : ಅಲ್ಲಿ ಚುನಾಯಿತ ಪ್ರತಿನಿಧಿಯು ಜನರಿಗೆ ಭಾಧ್ಯವಾಗುತ್ತಾ ಇದ್ದ. ಇಲ್ಲಿ ನೋಂದಾಯಿತ ಮತದಾರರು ಎಂದು ಇದೆ. 1983ರ ಕಾನೂನಿನಲ್ಲಿ ಮೆಜಾರಿಟಿಗೆ ಬಂದಿರತಕ್ಕಂಥ ಅಪಲಿಟ್ಟಿ ಯಾರ್‍ಯಾರು ಇರುತ್ತಾ ಇದ್ದರು, ಅಷ್ಟೂ ಜನರು ಆ ಗ್ರಾಮಸಭೆಯ ಸದಸ್ಯರಾಗಿರುತ್ತಿದ್ದರು.

+ ಡಾ: ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾಕೆ ಗೊಂದಲವಾಗಿದೆ ಅಂದರೆ ಮೊದಲು ಟುಟೈಯರ್ ಸಿಸ್ಟಂ ಇತ್ತು. ಈಗ ಥ್ರೀ ಟೈಯರ್ ಸಿಸ್ಟಂ ಬಂದಮೇಲೆ, ತಾಲ್ಲೂಕು ಪಂಚಾಯತಗಳು ಬಂದಮೇಲೆ ಸ್ವಲ್ಪ ಗೊಂದಲಗಳು ಕಾಣಸುತ್ತಾ ಇದೆ.

ಅಧ್ಯಕ್ಷರು : ನಾವು ಗ್ರಾಮಸಭೆಯ ಬಗ್ಗೆ ಡಿಸ್ಕಶನ್ ಮಾಡುತ್ತಾ ಇದ್ದೇವೆ.

ಡಾ: ಎಂ. ಶಂಕರನಾಯಕ್ : ಗ್ರಾಮಸಭೆಯಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಆ ಊರಿನಲ್ಲಿರತಕ್ಕಂಥ ಮತದಾರರು- ಅವರು ಹಿಂದೆಯೂ ಮತದಾರರು ಎಂದು ಇದೆ, ಈಗಲೂ ಮತದಾರರು ಎಂದೇ ಇದೆ. ಮತದಾರರು ಅದರ ಸದಸ್ಯರು. ಅಲ್ಲಿ ಯಾವುದೇ ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಲಿ, ಅಥವಾ ಯಾವುದೇ ಸರಕಾರದ ಸ್ಕೀಮುಗಳ ಇಂಪ್ಲಿಮೆಂಟೇಶನ್ ಕುರಿತಾಗಿ ಆ ಗ್ರಾಮಸಭೆಗೆ ಸಂಬಂಧಪಟ್ಟಂತೆ ಚರ್ಚೆಯಾಗಬೇಕು ಮತ್ತು ತೀರ್ಮಾನವನ್ನು ಆ ಸಭೆಯಲ್ಲಿಯೇ ತೆಗೆದುಕೊಳ್ಳಬೇಕು. ಆದ್ದರಿಂದ ಹಿಂದೆ ಮತ್ತು ಈಗ ಯಾವುದೇ ಅಂಥಾ ವ್ಯತ್ಯಾಸವಿಲ್ಲ. ಈಗ ತಾಲ್ಲುಕು ಪಂಚಾಯತ್‌ನವರು ಜಿಲ್ಲಾ ಪಂಚಾಯತಗೆ ಹೋಗಬೇಕು, ಜಿಲ್ಲಾಪಂಚಾಯತನವರು ತಾಲ್ಲೂಕು ಪಂಚಾಯತ್‌ಗೆ ಹೋಗಬೇಕು ಅಂದರೆ ಅವರ ಅಧಿಕಾರಕ್ಕೆ ಸೀಮಿತವಾಗಿ, ನಾವು ಅವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೇವೆ ಅದನ್ನು ಮೀರಿ ನಾವು ಹೋಗುತ್ತಾ ಇದ್ದೇವೆ. ಜಿಲ್ಲಾಪಂಚಾಯತ್‌ಗೆ ನಾವೇನು ಅಧಿಕಾರವನ್ನು ಕೊಟ್ಟಿದ್ದೇವೆ ಅದರ ಕೆಳಗೇ ಅವರು ಕೆಲಸ ಮಾಡಬೇಕಾಗುತ್ತದೆ. ತಾಲ್ಲೂಕು ಪಂಚಾಯತನಲ್ಲಿರತಕ್ಕಂಥವರು ಅವರ ವ್ಯಾಪ್ತಿಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಜಿಲ್ಲಾಪಂಚಾಯತ್‌ನವರು ಅಲ್ಲಿ ಬರಬೇಕು, ತಾಲ್ಲೂಕು ಪಂಚಾಯತನವರು ಇಲ್ಲಿಬರಬೇಕೆಂದು ಹೇಳಿದರೆ, ಪಾರ್ಲಿಮೆಂಟ್ ಸದಸ್ಯರುಗಳು ಕೂಡ ನಮ್ಮ ಶಾಸಕರ ಕ್ಷೇತ್ರದಿಂದ ಬರತಕ್ಕಂಥವರು ಅಂದಮೇಲೆ ನಾವು ಪಾರ್ಲಿಮೆಂಟಗೆ ಹೋಗುತ್ತೇವೆಂದು ಹೇಳಲು ಆಗುತ್ತದೆಯೇ? ಅವರಿಗೆ ಸೀಮಿತವಾದಂತೆ, ಅವರವರ ವ್ಯಾಪ್ತಿಯೊಳಗೆ ಅವರುಗಳು ಕೆಲಸ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಇಲ್ಲಿ ಏನಾಗಿದೆ ಅಂದರೆ ಮನೆಯನ್ನು ಕೊಡುವುದಾಗಲಿ, ಐಆರ್‌ಡಿಪಿ ಯಾಗಲಿ, ಇನ್ಯಾವುದೇ ಅಭಿವೃದ್ಧಿ ಕೆಲಸವಾದರೂ ಕೂಡ ಅದು ಗ್ರಾಮಸಭೆಯ ಮುಖಾಂತರ ತೀರ್ಮಾನವಾಗಬೇಕು. ಆದರೆ ಅದನ್ನು ಸರಿಯಾಗಿ ನಿರ್ವಹಣೆಯನ್ನು ಯಾವ ಪಂಚಾಯತನಲ್ಲಿಯೂ ಸರಿಯಾಗಿ ಮಾಡುತ್ತಾ ಇಲ್ಲ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಹಿಂದಿನ ಗ್ರಾಮಸಭೆಗಳನ್ನು ಕರೆದಾಗಲೂ ಕೂಡ ಮೊದಲು ಮೊದಲು 2-3 ಗ್ರಾಮಸಭೆಗಳು ಹಾಗೋ ಹೀಗೋ ಆಯಿತು. ಚೆನ್ನಾಗಿಯೇ ಯಶಸ್ವಿಯಾಗಿ ಆಯಿತು. ಆ ಮೇಲೆ ಕೆಲವು ಪಂಚಾಯತಿಯ ಪ್ರಧಾನರುಗಳು ಆ ಗ್ರಾಮಸಭೆಯನ್ನು ಎದುರಿಸುವಂಥ ಪರಿಸ್ಥಿತಿಯಲ್ಲಿರಲಿಲ್ಲ. ಅದನ್ನು ಕಳೆದುಕೊಂಡರು. ಹೀಗೆ ಆಮೇಲೆ ಆಮೇಲೆ ಕರೆಯಲೇ ಇಲ್ಲ. ಇದನ್ನು

ತಾವು ತಿದ್ದುಪಡಿ ತರುವುದಾದರೆ, ಗ್ರಾಮಸಭೆಯನ್ನು ಕರೆಯುವುದನ್ನು ಕಡ್ಡಾಯಗೊಳಿಸಬೇಕು.

ಅಧ್ಯಕ್ಷರು : ಇದು ತುಂಬಾ ವ್ಯಾಲೀಡ್ ಪಾಯಿಂಟ್.

ಶ್ರೀ ಆರಗಜ್ಞಾನೇಂದ್ರ : ಇನ್ನೊಂದು ವಿಚಾರ ನಮ್ಮ ಅನೇಕ ಕ್ಷೇತ್ರಗಳಲ್ಲಿ ರಿಸರ್ವೇಶನ್ ಇತ್ಯಾದಿಗಳಿಂದ ಕೆಲವರು ಚೇರ್ಮನ್‌ಗಳಾಗಿ ಬಂದಿದ್ದಾರೆ. ಇವರ ಬಗ್ಗೆ ಕೆಲವರಲ್ಲಿ ಇನ್ನೂ ಕೂಡ ಮಾತ್ಸರ್ಯದ ಭಾವನೆ ಉಳಿದುಕೊಂಡು, ಕೆಲವು ಕಡೆಗಳಲ್ಲಿ ಗ್ರಾಮಸಭೆಗಳನ್ನು ನಡೆಸಲು ಬಿಡುತ್ತಾ ಇಲ್ಲ. ದಯಮಾಡಿ ಪೋಲೀಸ್ ರಕ್ಷಣೆಯನ್ನಾದರೂ ಕೊಟ್ಟು ಗ್ರಾಮಸಭೆಗಳನ್ನು ಕಡ್ಡಾಯವಾಗಿ ನಡೆಸುವ ಹಾಗೆ ಮಾಡಬೇಕು. ಅವರ ಒಂದು ಪ್ರಗತಿಪತ್ರವನ್ನು ಮತದಾರರ ಸಮ್ಮುಖದಲ್ಲಿ ಇಡುವ ಹಾಗೆ ಮಾಡಿದರೆ, ಇದಕ್ಕೊಂದು ಅರ್ಥ ಬರುತ್ತದೆ ಎಂದು ಹೇಳಬಯಸುತ್ತೇನೆ.

+ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಮಗೆ ಇರತಕ್ಕಂಥ ಒಂದು ಗೊಂದಲ ಏನೆಂದರೆ.

ಅಧ್ಯಕ್ಷರು : ನೀವು ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತಾ ಇದ್ದೀರಿ, ಇಲ್ಲಿ ಕೇಂದ್ರೀಕೃತ ಸಭೆಯು ನಡೆಯುತ್ತಾ ಇದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ವಿಧಾನಸಭೆ ಮತ್ತು ಲೋಕಸಭಾ ಸದಸ್ಯರನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತನ ಸಭೆಗೆ ಬರಲು ಅವಕಾಶವನ್ನು ಕಲ್ಪಿಸಿದ್ದೀರಿ. ಜಿಲ್ಲಾ ಪರಿಷತ್ ಸದಸ್ಯರಿಗೆ ಅವಕಾಶವನ್ನು ಏಕೆ ಬಿಟ್ಟಿದ್ದೀರಿ ಎಂಬುದು ಒಂದು ವಿಚಾರ. ಏಕೆಂದರೆ ಅದನ್ನು ತಾವು ಕನವಿನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಶಾಸಕರು ಮತ್ತು ಲೋಕಸಭಾ ಸದಸ್ಯರು ಬರಬಹುದು, ಇಲ್ಲಿ ಮತದಾರರ ಹಕ್ಕು ಎಂಬ ಪ್ರಶ್ನೆ ಅಲ್ಲ. ಮತದಾರರ ಹಕ್ಕು ಇಲ್ಲದಿದ್ದರೂ ಕೂಡ ಆ ತಾಲ್ಲೂಕು, ಜಿಲ್ಲಾಪಂಚಾಯತ್ ಸಮಿತಿಯಲ್ಲಿ ಏನು ನಡೆಯುತ್ತದೆ, ಏನು ಕಾರ್ಯಕ್ರಮ ಆಗುತ್ತದೆ ಎಂಬುದನ್ನು ಜಿಲ್ಲಾಪಂಚಾಯತ್ ಸದಸ್ಯರು ಮತ್ತು ಶಾಸಕರು, ಲೋಕಸಭಾ ಸದಸ್ಯರಿಗೂ ಗೊತ್ತಾಗಬೇಕು. ಇಲ್ಲವಾದಲ್ಲಿ ಅಲ್ಲಿ ಏನು ನಡೆಯುತ್ತದೆ ಎಂಬುದು ಗೊತ್ತಾಗುವುದಿಲ್ಲ. ಈ ಗ್ರಾಮಸಭೆಗಳ ಬಗ್ಗೆ ಹೇಳುವುದಾದರೆ ಗ್ರಾಮಸಭೆಗಳು ಏಕೆ ಸಂಪೂರ್ಣವಾಗಿ ವಿಫಲವಾಗಿವೆ ಎಂಬ ವಿಚಾರ ಬಂದಾಗ ಬಹುಶಃ ಗ್ರಾಮಸಭೆಗಳಿಗೆ ಅಧಿಕಾರಗಳಿಗೆ ತಾವು ಬರಲು ಹೇಳುತ್ತೀರಿ. ಪಂಚಾಯತ್‌ನಲ್ಲಿ ಗ್ರಾಮಸಭೆಗಳನ್ನು ಕರೆಯತಕ್ಕಂಥ ಅಧಿಕಾರವನ್ನು ಪಂಚಾಯತ್‌ನ ಅಧ್ಯಕ್ಷರಿಗೆ ಕೊಟ್ಟಿದ್ದೀರಿ. ಸುತ್ತೋಲೆಗಳನ್ನು ಕಳುಹಿಸತಕ್ಕಂಥ ಅಧಿಕಾರವನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗೆ ಕೊಟ್ಟಿದ್ದೀರಿ. ಅವರು ಪಂಚಾಯತ್‌ಗಳಿಗೆ ಡೇಟ್ ಕೊಟ್ಟು ಇಂತಿಂಥ ದಿವಸ ನೀವು ಗ್ರಾಮಸಭೆಗಳನ್ನು ಕರೆಯಿರಿ ಎಂದು ಹೇಳುತ್ತಾರೆ. ತಮಗೆ ನೆನಪಿರಬಹುದು, ಮುಂಚಿನ ಗ್ರಾಮಸಭೆಗಳಲ್ಲಿ ಬಹಳಷ್ಟು ಜನರು ಬರುತ್ತಾ ಇದ್ದರು. ಅಲ್ಲಿ ಏನಾದರೂ ಪ್ರಯೋಜನ ಸಿಗುತ್ತದೆ, ಬೇರೆ ಬೇರೆ ಸೌಲಭ್ಯಗಳು ಬಂದಂಥ ಜನರಿಗೆ ಏನಾದರೂ ಸೌಲಭ್ಯಗಳನ್ನು ಕೊಡಲು ಸಾಧ್ಯವೇ ಎಂಬುದನ್ನು ನೋಡಬೇಕು. ಇವೊತ್ತು ಯಾವ ಅರ್ಹ ಫಲಾನುಭವಿಗಳೂ ಗ್ರಾಮಸಭೆಗಳಲ್ಲಿ ಆಯ್ಕೆಯಾಗುತ್ತಾ ಇಲ್ಲ. ಗ್ರಾಮಸಭೆಗಳಿಗೆ

ಬರತಕ್ಕಂಥ ಜನರ ಸಂಖ್ಯೆಯೂ ಕಡಿಮೆಯಾಗುತ್ತಾ ಇದೆ. ಅದರೊಂದಿಗೆ ತಮ್ಮ ಅಧಿಕಾರಿಗಳು ಸಭೆಗೆ ಬಾರದಿದ್ದರೆ ಅವರ ಬಗ್ಗೆ ತಾವೇನು ಹಿಡಿತವನ್ನು ಇಟ್ಟಿದ್ದೀರಿ? ಅಂಥ ಯಾವ ಹಿಡಿತವೂ ಇಲ್ಲ. ಬಿಡಿಓ ವಿಲೇಜ್ ಅಕೌಂಟೆಂಟ್ ಕೂಡ ಸಭೆಗೆ ಬರುತ್ತಾ ಇಲ್ಲ. ಕೃಷಿಸಹಾಯಕರೂ ಕೂಡ ಬರುತ್ತಾ ಇಲ್ಲ. ಯಾವುದೇ ತಾಲ್ಲೂಕುಮಟ್ಟದ ಅಧಿಕಾರಿಯೂ ಸಹ ಗ್ರಾಮಸಭೆಗಳಿಗೆ ಬರುತ್ತಾ ಇಲ್ಲ. ಆದ್ದರಿಂದ ಈ ಗ್ರಾಮಸಭೆಯು ತನ್ನ ಅಸ್ತಿತ್ವವನ್ನು ಕಳೆದುಕೊಂಡು 4-6 ತಿಂಗಳಿಗೊಮ್ಮೆ ಸಭೆಯನ್ನು ನಡೆಸುತ್ತಿದೆ. ಐದಾರು ಜನರು ಬರುತ್ತಾರೆ. ಸಭೆ ನಡೆದಿದೆ ಎಂಬ ದಾಖಲಾತಿಯನ್ನು ಮಾಡುತ್ತಾರೆಯೇ ಹೊರತು, ಯಾವ ಉದ್ದೇಶದಿಂದ ಗ್ರಾಮಸಭೆಯು ಆಗಬೇಕಾಗಿತ್ತೋ ಅದು ಈಡೇರುತ್ತಾ ಇಲ್ಲ. ಇನ್ನೊಂದು ಸ್ಥಾಯಿ ಸಮಿತಿ ಎಂದು ತಾವು ಮಾಡುತ್ತೀರಿ. ಅದರಲ್ಲಿ ಅರ್ಹ ಫಲಾನುಭವಿಗಳಿಗೆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅದು ಒಳ್ಳೆಯ ಕಾರ್ಯಕ್ರಮ. ಆದರೆ ಅದು ಯೋಜನೆಗೆ ಬಾರದೇ ಇದ್ದರೆ, ಅಲ್ಲಿ ಏನಾಗುತ್ತದೆ ಎಂಬುದು ಯೋಜನೆಯವರಿಗೂ ಕೂಡ ಗೊತ್ತಾಗುವುದಿಲ್ಲ. ಆ ಬಗ್ಗೆ ತಾವುಗಳು ಬೆಳಕನ್ನು ಚೆಲ್ಲಬೇಕು.

5.40 ಪಿ.ಎಂ.

ಡಾ: ಯು. ಚಿತ್ತರಂಜನ್ : ಈ ಎಕ್ಸ್‌ಪರ್ಟ್ ಕಮಿಟಿ ಏನು ಶಿಫಾರಸ್ ಮಾಡುತ್ತದೆ ದಯವಿಟ್ಟು ಅದನ್ನು ವ್ಯಾಪಕವಾಗಿ ಚರ್ಚೆಗೊಳಪಡಿಸಿ ಮತ್ತೆ ನೀವು ಶಾಸನ ತರಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ಸಾಕಷ್ಟು ಗೊಂದಲಗಳಿವೆ. ಈಗ ಮೀಸಲಾತಿ ಸೀಟಿನಲ್ಲಿ ಬಂದ ಅಧ್ಯಕ್ಷ ಉಪಾಧ್ಯಕ್ಷ ಏನಿದ್ದಾರೆ ಅವನು ಮೆಜಾರಿಟಿ ಇಲ್ಲ. ಅವನು ನಿಲುವಳಿ ತಂದಾಗ resolution is defeated by the body. What is the purpose of President & V.P. ಅಧಿಕಾರಿಗಳಿಗೆ ಬರಬೇಕೆಂದು ನಾವು ಹೇಳುತ್ತೇವೆ, ನಾನು ಒಂದು ಸಭೆಯಲ್ಲಿ ಕುಳಿತುಕೊಂಡಿದ್ದ, ಅಧಿಕಾರಿಗಳು ಬರಬೇಕೆಂದು ಎಲ್ಲಿದೆ ತೋರಿಸಿ ಅಂದರು. ಆಕ್ಟ್ ನೋಡಿದರೆ within 15 days notice has to be served to the concerned officer. 15 days in advance. ಹಾಗಾಗಿ ಖಂಡಿತ ಇದಕ್ಕೆ ಎಕ್ಸ್‌ಪರ್ಟ್ಸ್ ಬೇಕೇ ಬೇಕು. ಆ ಎಕ್ಸ್‌ಪರ್ಟ್ ಕಮಿಟಿ ಏನುಕೊಡುತ್ತದೆ ಅದನ್ನು ಶಾಸನ ತಂದ ಮೇಲೆ ನಾವಿಲ್ಲಿ ಏನು ಮಾಡುವುದಕ್ಕೂ, ಯಾರಿಲ್ಲಿ ಅನುಭವಿಸಿದ್ದಾರೆ ಕಷ್ಟಪಟ್ಟಿದ್ದಾರೆ ಅವರ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಶಿವಶರಣಪ್ಪ ಬಿದರೂರು : ಅಧ್ಯಕ್ಷರೇ, ಇಲ್ಲಿನ ಚರ್ಚೆ ಬಗ್ಗೆ ನಾನೂ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಗ್ರಾಮಸಭೆ ಅತ್ಯಂತ ನಿರ್ಣಾಯಕ ಘಟ್ಟ ಪದ್ಧತಿ ನಿಯಮಬದ್ಧವಾಗಿಲ್ಲವೆಂದು ಹೇಳಬಯಸುತ್ತೇನೆ. ಇಲ್ಲಿ ಒಂದು ಉದಾಹರಣೆ ಹೇಳುವುದಾದರೆ, ಇಲ್ಲಿನ ಅಧ್ಯಕ್ಷರು, ಅತ್ಯಂತ ಉನ್ನತ ವಿಚಾರಗಳಿರುವ ಸದಸ್ಯರಿರುವ ಶಾಸನಸಭೆಯನ್ನೇ ಅವರು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಶಾಸನಸಭೆಯೊಳಗೆ ಆ ಕಾಲದ ಎಲ್ಲಾ ಮತದಾರರೂ ಆ ಗ್ರಾಮಸಭೆ ಸದಸ್ಯರಾಗಿರುವುದರಿಂದ ಕೇವಲ 200 ರಿಂದ 500 ಜನಸಂಖ್ಯೆಯಿರುವ ಗ್ರಾಮಗಳಲ್ಲಿ ನಿಯಮಬದ್ಧವಾಗಿ ಗ್ರಾಮಸಭೆ ಮಾಡಲು ಸಾಧ್ಯವಿದೆ. ಆದರೆ 5 ರಿಂದ 10 ಸಾವಿರ ಜನಸಂಖ್ಯೆಯಿರುವ.

ಕೆಲವು ಗ್ರಾಮಗಳಿರುವುದರಿಂದ ಅಲ್ಲಿ ನಿಯಮಬದ್ಧವಾಗಿ ಗ್ರಾಮಸಭೆ ನಡೆಸಲು ಅಸಾಧ್ಯವಾಗುತ್ತದೆ. ನಿಜವಾಗಿಯೂ ಈ ಗ್ರಾಮಸಭೆಗಳನ್ನು ನಡೆಸಲಿಕ್ಕೆ ವಿಶೇಷವಾದ ನಿಯಮಗಳನ್ನು ರೂಪಿಸಿದರೆ, ಹೆಚ್ಚು ಅಧಿಕಾರಯುತವಾದ ಕೆಲವು ಹೊಣೆಗಾರಿಕೆಯನ್ನು ಕೊಡುವುದರ ಮೂಲಕ ಗ್ರಾಮಸಭೆಯು ನಿರ್ಣಾಯಕ ಘಟಕಗಳನ್ನಾಗಿ ಮಾಡಲು ಸಾಧ್ಯವೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಎರಡು ಮಾತು ಮುಗಿಸುತ್ತೇನೆ.

MR. SPEAKER : That is a good suggestion.

+ ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ ನಿಜವಾಗಿಯೂ ನಾನು ಸದನದ ಎಲ್ಲಾ ಸದಸ್ಯರನ್ನು ಅಭಿನಂದಿಸುತ್ತೇನೆ. ನಾವು ಮಾಡುವಂತಹ ಯಾವುದೇ ಕಾಯಿದೆಗಳೂ ಪರಿಪೂರ್ಣವಾಗಿರುತ್ತವೆಂದಲ್ಲ. ಇರುವಂತಹ ಅಪರಿಪೂರ್ಣ ಕಾಯಿದೆಗಳು ನಮ್ಮ ಆಯಾ ಕಾಲಮಾನದ ಸ್ಥಿತಿ ಮತ್ತು ಆ ಸಮಾಜದ ಪ್ರಬುದ್ಧತೆಯನ್ನವಲಂಬಿಸಿ ಕಾನೂನುಗಳು ರಚನೆಗೊಳ್ಳುತ್ತವೆ. ಪ್ರಬುದ್ಧವಲ್ಲದ ಸಮಾಜ, ಕಾನೂನನ್ನು ಯಾವರೀತಿ ಕಾನೂನುಬದ್ಧವಾಗಿಯೇ ಅದನ್ನು ದುರುಪಯೋಗಪಡಿಸಿಕೊಳ್ಳಬಹುದೆಂದು ಯೋಚನೆ ಮಾಡುತ್ತದೆ. ಅದ್ದರಿಂದಲೇ ನಮ್ಮ ನ್ಯಾಯಾಲಯಗಳು, 136 ಅದಕ್ಕೆ ವ್ಯಾಖ್ಯಾನಗಳು ಅದಕ್ಕೆ ಬೇಕಾದ ತೀರ್ಮಾನಗಳು ಕೂಡ ಇರುತ್ತವೆ. ಬಟ್ಟಿನಲ್ಲಿ ಹೇಳುವುದು, ಒಂದು ಪ್ರಬುದ್ಧ ಸಮಾಜ, ಕಾಯಿದೆ ಮೂಲಕ ನಿಯಂತ್ರಿಸಲ್ಪಡಬೇಕು ಅಂತ ಬಯಸುವುದಿಲ್ಲ. ಅದು ತನ್ನ ಪ್ರಬುದ್ಧತೆಯಿಂದ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡುತ್ತದೆ. ಇದರ ಸಮೇತವೂ ಕೂಡ ನಾವು ರಚನೆ ಮಾಡಿರುವ ಕಾಯಿದೆಯಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಬೇಕಾದ ಅನಿವಾರ್ಯತೆಯನ್ನು ನ್ಯೂನತೆಗಳನ್ನು ಕಂಡ ಮೇಲೆ, ಒಂದು ಪರಿಣತರ ಸಮಿತಿ ಅಂತ ಮಾಡಿ ಈ ತಿದ್ದುಪಡಿಗಳನ್ನು ವ್ಯಾಪಕವಾಗಿ ತರಬೇಕಾಗಿದೆ. ನಮ್ಮ ಸರ್ಕಾರ ಅಧಿಕಾರದ ವಿಕೇಂದ್ರೀಕರಣದಲ್ಲಿ ಬದ್ಧತೆ ಇಟ್ಟುಕೊಂಡಿರುವ ಸರ್ಕಾರವಾಗಿರುವುದರಿಂದ ಇದನ್ನು ನಾವು ಪರಿಣಾಮಕಾರಿಯಾಗಿ ಮಾಡಬೇಕಾಗಿದೆ. ಅದಕ್ಕಾಗಿಯೇ ನಾವು ಪರಿಣತರ ಸಮಿತಿ ಮಾಡಿದ್ದೇವೆ. ಆ ಸಮಿತಿ ಎರಡು ಮೂರು ತಿಂಗಳಲ್ಲೇ ತನ್ನ ವರದಿಯನ್ನು ಸಮಗ್ರವಾಗಿ ಕೊಡುತ್ತದೆ. ಇದಕ್ಕೆ ವ್ಯಾಪಕ ಪ್ರಚಾರ ಕೊಡುವುದರ ಜೊತೆಗೆ ಸದನದ ಒಳಗೆ ಮತ್ತು ಹೊರಗೆ ಕೂಡ ಬಹಳ ಮಟ್ಟಿಗೆ ಚರ್ಚೆಯಾದ ಮೇಲೆ ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ವಿಚಾರ ಮಾಡಿ, ಯಾವುದು ಯೋಗ್ಯ ಯಾವುದು ಕಾರ್ಯಸಾಧು ಎಂದು ವಿಚಾರ ಮಾಡಿ, ಅದನ್ನು ಅಳವಡಿಸುವ ಪ್ರಯತ್ನವನ್ನು ಖಂಡಿತವಾಗಿಯೂ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಇದು ಒಂದನೇ ಭಾಗ. ಎರಡನೆಯದು, ನಾವು ಅಧಿಕಾರ ವಿಕೇಂದ್ರೀಕರಣದಲ್ಲಿ ಪೂರ ಬದ್ಧವಾಗಿದ್ದೇವೋ ಇಲ್ಲವೋ ಎಂಬ ವಿಚಾರಗಳಲ್ಲಿ ಬಹಳ ಸ್ಪಷ್ಟವಾದ ತಿಳುವಳಿಕೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ನೀವು ಹೇಳಿದಂತೆ ನಮ್ಮ ಆಡಳಿತ ನಡೆಸುವ ಕ್ರಮದಲ್ಲಿ ನಮ್ಮ ಮೀಸಲಾತಿ ಕ್ರಮದಿಂದಾಗಬಹುದು, ಅಥವಾ ತರಬೇತಿ ಇಲ್ಲದ ಕಾರಣಗಳಾಗಿರಬಹುದು ಅಥವಾ ಅಗತ್ಯವಾದ ಸ್ವಲ್ಪಮಟ್ಟಿನ ಸಾಕ್ಷರತೆ ಅನುಭವಗಳ ಕೊರತೆ ಇರಬಹುದು. ಇವುಗಳ ಮೂಲಕವಾಗಿಯೂ ಕಾನೂನನ್ನು ಅನುಷ್ಠಾನ ಗೊಳಿಸುವ ಸಂದರ್ಭಗಳಲ್ಲಿ ತಪ್ಪಾಗಿರಬಹುದು, ಇಲ್ಲ ಎಂದಲ್ಲ. ಇದನ್ನು ಕಂಡುಹಿಡಿದು ಪ್ರತಿಸಲ ನಮ್ಮ ಹೆಚ್ಚಿನ ಸ್ವಾತಂತ್ರ್ಯ ಕೊಡುವ ಸಂದರ್ಭದಲ್ಲಿ

ವಿನಸ್ಟನ್ ಚರ್ಚಿಲರು ಇದೇ ಮಾತು ಮಾತಾಡುತ್ತಿದ್ದರು. ನಿಮ್ಮ ದೇಶಕ್ಕೆ ಸ್ವಾತಂತ್ರ್ಯ ಪಡೆಯಲಿಕ್ಕೆ ನೀವು ಅರ್ಹರಲ್ಲ, ನೂರಾರು ಭಾಷೆಗಳನ್ನು ಮಾತನಾಡುವ, ಸಾವಿರಾರು ಜಾತಿ ಉಪಜಾತಿ ಇಟ್ಟುಕೊಂಡಿರುವವರು ಅಜ್ಞಾನ ಮತ್ತು ಬಡತನದಲ್ಲಿರುವ ನೀವು ಪ್ರಜಾಪ್ರಭುತ್ವಕ್ಕನುಗುಣವಾಗಿ ರಾಷ್ಟ್ರವನ್ನು ಸ್ವತಂತ್ರವಾಗಿ ಆಳಲಿಕ್ಕೆ ನೀವು ಅನರ್ಹರು ಎಂದು ಹೇಳಿದಂಥ ಸಂದರ್ಭದಲ್ಲಿ ಮಹಾತ್ಮಗಾಂಧಿಯವರು ``We do not want a good Government, but we want our Government" ಅಂತ ಹೇಳಿದರು. ನಮ್ಮದೇ ಆದ ಸರ್ಕಾರ ಬೇಕು ಅಂತ ಹೇಳಿದರೇ ವಿನಹ, ಬಹಳ ಒಳ್ಳೆಯ ಸರ್ಕಾರ ಬೇಕು ಎಂದಲ್ಲ. ಈಗಾಗಲೇ ಮಾನ್ಯ ಅಧ್ಯಕ್ಷರೇ, ಜ್ಞಾನೇಂದ್ರ ಅವರು ಮಾತನಾಡಿದ ಸಂದರ್ಭದಲ್ಲಿ ಒಂದು ಆಯುಧವನ್ನು ಕೊಟ್ಟರೆ ಅದನ್ನು ಉಪಯೋಗಿಸುವ ಜನರಿಗೆ ತರಬೇತಿ ಕೊಡಬೇಕು ಅಂತ ಹೇಳಿದರು. ಆ ತರಹ ತರಬೇತಿ ಕೊಡಬೇಕಾಗಿರುವುದು ನಿಜ, ಆದರೆ ನಮಗೆ ಕೂಡ ತರಬೇತಿ ಕೊಟ್ಟಮೇಲೆ ಇಲ್ಲಿ ಆಯ್ಕೆಯಾಗಿ ಬರಲಿಲ್ಲ. ಅನುಭವಗಳ ಮೂಲಕ ಈ ರೀತಿಯಾದ ಕೆಲಸಗಳನ್ನು ಮಾಡಬೇಕಾಗುತ್ತದೆ. ನಾವು ಮಾಡಬೇಕಾದ ಕೆಲಸದ ಬಗ್ಗೆ ಶರಣರ ಒಂದು ವಚನ ಕೂಡ ಇದೆ. ಕೈಗೆ ಕೊಡಬಹುದಲ್ಲದೆ ಪರಾಕ್ರಮದ ಕೊಡಬಹುದೇ? ಕೆರೆಯ ಕಟ್ಟಬಹುದಲ್ಲದೆ ನೀರು ನಿಲ್ಲಿಸಬಹುದೆ ಅಂತ ಹೇಳುತ್ತಾರೆ. ಕೆರೆ ನಾವು ಕಟ್ಟಬಹುದು, ಆದರೆ ನೀರು ನಿಲ್ಲಿಸುವ ಅಧಿಕಾರ ನಮಗಿಲ್ಲ. ಕೈಗೆ ಖಡ್ಗ ಕೊಡಬಹುದು ಆದರೆ ಪರಾಕ್ರಮ ಕೊಡಲು ಆಗುವುದಿಲ್ಲವೆಂದು ಶರಣರ ವಚನವಿದೆ. ಹಾಗೇನೆ ನಿಮಗೆ ಪರಾಕ್ರಮವೆಂಬುದು ನಿಮ್ಮ ಅನುಭವಗಳ ಶಕ್ತಿಗಳ ಮೂಲಕ ಬರುತ್ತದೆ. ಹಾಗಾದರೆ ನೀರು ನಿಲ್ಲಿಸುವುದು ನಮ್ಮ ಕೈಲಿಲ್ಲ ಅಂತ ಕೆರೆ ಕಟ್ಟುವುದೇ ಬಿಟ್ಟುಬಿಟ್ಟರೆ? ಪರಾಕ್ರಮ ಇಲ್ಲವೆಂದು ಖಡ್ಗ ಕೊಡುವುದನ್ನೇ ಬಿಟ್ಟರೆ ಹೇಗಾಗುವುದಿಲ್ಲವೋ ಹಾಗೇ ನಾವು ಅಧಿಕಾರಗಳನ್ನು ಕೊಡಬೇಕು ಆ ಮೂಲಕ, ಆದ್ದರಿಂದಲೇ ಬಲವಂತರಾವ್ ಮೆಹ್ತ ಬಹಳ ಸ್ಪಷ್ಟವಾಗಿ ಈ ವಿಚಾರಗಳನ್ನು ಹೇಳುತ್ತಾರೆ. They have a right to commit a mistake. ಎಂದು ತಪ್ಪು ಮಾಡುವ ಅಧಿಕಾರವೂ ಅವರಿಗಿದೆ ಎಂದು. ಆದ್ದರಿಂದ ನಮ್ಮಲ್ಲಿರುವ ಮಾನಸಿಕ ಬೌದ್ಧಿಕ ಗೊಂದಲಗಳಿಂದ ನಾವು ಅಧಿಕಾರ ವಿಕೇಂದ್ರಿಕರಣಕ್ಕೆ ಬದ್ಧರಾಗಿದ್ದೇವೆಯೇ ಅಂತ ಹೊರಗೆ ಬರಬೇಕು. ಎಲ್ಲರ ನ್ಯೂನತೆಗಳ ನಡುವೆಯೂ ನಾವು ಇದನ್ನು ಸ್ವೀಕರಿಸುತ್ತೇವೆಂಬ ಮಾನಸಿಕ ತಯಾರಿ ಮಾಡಿಕೊಂಡಾಗ ಮಾತ್ರ ಇದು ಸಫಲತೆ ಕಾಣಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಾನು ಹೆಚ್ಚು ವಿವರವಾಗಿ ಹೋಗುವುದಿಲ್ಲ. ಅಧ್ಯಕ್ಷರೇ ತಾವು ಗ್ರಾಮಸಭೆಯಲ್ಲಿ ಕುಳಿತಾಗ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದಿರಿ. ಹಿಂದಿನ ಗ್ರಾಮಸಭೆಗಳಿಗೂ ಇದಕ್ಕೂ ಗುಣಾತ್ಮಕವಾದ ಬದಲಾವಣೆಗಳಿಲ್ಲ. ಹಾಗೆ ಹೇಳುವಾಗ Definition of Grama, Sabha.

> ``Grama Sabha means a body consisting of persons registered under the electoral rolls relating to the village comprising within the area of Grama Panchayat".

18 ವರ್ಷದವರಿಂದ ಹಿಡಿದು ಮುದುಕರೂ ಅವರಲ್ಲಿ ಭಾಗವಹಿಸಬೇಕೆಂದಿರುವಾಗ ಇಲ್ಲೂ

ಕೂಡ ಇವತ್ತು ನಾವು 18 ವರ್ಷಕ್ಕೆ ಇಳಿಸಿರುವುದರಿಂದ ಗುಣಾತ್ಮಕ ಬದಲಾವಣೆಗಳಿವೆ. ಇನ್ನು ಗ್ರಾಮ ಸಭೆಯನ್ನು ಕರೆಯಬೇಕಾದ ವಿಷಯದಲ್ಲೂ ಕೂಡ ಎಷ್ಟು ಸಲವಾದರೂ ಕರೆಯಬಹುದು.

> ``Subject to the general orders of the Government Grama Sabha shall meet from time to time but six months shall not intervene between any of the two meetings. It the Grama Panchayat fails to convene Grama Sabha, the Executive Officer shall convene to Grama Sabha". ಎಂದಿದೆ. ಹಾಗೇ

> ``The Grama Panchayat shall give due consideration to the recommendations and suggestions of the Grama Sabha".

ಈ ರೀತಿಯಾಗಿ ಅವರ ಅಧಿಕಾರವನ್ನೂ ಬಹಳ ಸ್ಪಷ್ಟವಾಗಿ ಹೇಳಿರುವುದರಿಂದ ಅಂತಹ ಗುಣಾತ್ಮಕ ಬದಲಾವಣೆಗಳಿಲ್ಲ. ಇನ್ನು ಬಹಳ ಮುಖ್ಯವಾಗಿರುವಂತಹ ಪ್ರಶ್ನೆ. ಮಾನ್ಯ ರಾಮಕೃಷ್ಣ ಅವರು ಒಂದು ಪ್ರಶ್ನೆ ಎತ್ತಿದರು. ನೀವು ತಾಲ್ಲೂಕಾಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಈ ಅಧಿಕಾರವನ್ನು ಕೊಟ್ಟಿರುತ್ತೀರಿ. ಗ್ರಾಮಪಂಚಾಯಿತಿ ಅಧ್ಯಕ್ಷರಿಗೂ ತತ್ಸಂಬಂಧವಾದ ತಿದ್ದುಪಡಿ ಏಕೆ ತಂದಿಲ್ಲ ಅಂತ. ಅಧ್ಯಕ್ಷರೇ ತಮಗೆ ಗೊತ್ತಿದ್ದಂತೆ ಗ್ರಾಮಸಭೆಗಳಲ್ಲಿ ಸರ್ಕಾರಕ್ಕೆ ಸಲಹೆಸೂಚನೆ ಮಾರ್ಗದರ್ಶನ ಕೊಡುವಂತಹ ಹೆಚ್ಚಿನ ಅಧಿಕಾರ ಇರುವುದಿಲ್ಲ, ಕಾರ್ಯದರ್ಶಿ ಬಿಲ್ಲನ್ನು ಬಿಟ್ಟರೆ. ಮತ್ತೆ ಅವರು ಜೆಆರ್‌ವೈ ಯೋಜನೆಯ ಶೇಕಡ 80ರಷ್ಟು ಖರ್ಚು ಮಾಡುವುದನ್ನು ಬಿಟ್ಟರೆ, ಅವರಿಗೆ ಸರ್ಕಾರದ ಹೆಚ್ಚಿನ ಹಣ ಕೊಟ್ಟಿರುವುದಿಲ್ಲ. ಅದರ ಜೊತೆಗೆ ಗ್ರಾಮಪಂಚಾಯಿತಿ ಅಧಿಕಾರದ ಬಗ್ಗೆ ಬಹಳ ಸ್ಪಷ್ಟವಾದ ಮಾತು ಕೂಡ ಇದೆ. ಆದ್ದರಿಂದ ನಾವು ತತಕ್ಷಣದಲ್ಲಿ ಬದಲಾವಣೆ ಮಾಡಬೇಕಾದ ಅನಿವಾರ್ಯತೆ ಕಾಣಲಿಲ್ಲ. ಪರಿಣಿತರ ಸಮಿತಿ ವರದಿ ಬಂದ ಮೇಲೆ, ಅದನ್ನೂ ಕೊಡಬಹುದು ಎಂಬುದು. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿ ಅಧ್ಯಕ್ಷರ ಕುರಿತಾಗಿ ಈ ವಿಚಾರ ಏಕೆ ತಂದಿದ್ದೇವೆಂದರೆ, ಜ್ಞಾನೇಂದ್ರ ಮತ್ತು ಶ್ರೀಶೈಲಪ್ಪ ಬಿದರೂರುರಂತೆ ಅನೇಕ ಸದಸ್ಯರೆಲ್ಲ ಯಾರು ಜಿಲ್ಲಾಪರಿಷತ್ತಿನಲ್ಲಿ ಕೆಲಸ ಮಾಡಿದ್ದಾರೋ, ಅವರೆಲ್ಲರೂ ಜಿಲ್ಲಾಪರಿಷತ್ತಿನ ಹಿಂದಿನ ಅಧ್ಯಕ್ಷರಿಗಿದ್ದ ಅಧಿಕಾರ ಈಗಿನ ಜಿಲ್ಲಾಪಂಚಾಯಿತಿ ಅಧ್ಯಕ್ಷರಿಗೆ ಇಲ್ಲವೆಂಬ ಕಾರಣದಿಂದ ಅವರೆಲ್ಲರೂ ಹೆಚ್ಚಿನ ವ್ಯಾಪಕವಾದ ಅಧಿಕಾರ ಕೊಡಬೇಕು ಅದಕ್ಕೆ ನೀವು ವಿಳಂಬ ಮಾಡಬೇಡಿ ಎಂದು ಹೇಳಿದ್ದಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುವವರು ನಮ್ಮನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ, ಯಾವುದೇ ವಿಚಾರದಲ್ಲಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲವೆನ್ನುವ ಮಾತನ್ನು ಹೇಳಿದ್ದರಿಂದ ಮತ್ತು ಮನವಿಯನ್ನು ಕೊಟ್ಟಿದ್ದರಿಂದ, ಪರಿಣಿತರ ಸಮಿತಿ ವರದಿ ಬರುವುದಕ್ಕೆ ಸ್ವಲ್ಪಮಟ್ಟಿಗೆ ವಿಳಂಬವಾಗುತ್ತದೆಂಬ ಕಾರಣಕ್ಕಾಗಿ, ಇಲ್ಲಿ ಜನಪ್ರತಿನಿಧಿಯಾದವನೇ ಸಾರ್ವಭೌಮ ಆಗಬೇಕೆನ್ನುವ ಕಾರಣಕ್ಕಾಗಿ, ಈ ಅಧ್ಯಾದೇಶವನ್ನು ತಂದು ಅದರ ಮೂಲಕವಾಗಿ ಅವರಿಗೆ ಅಧಿಕಾರವನ್ನು ನಾವು ಕೊಟ್ಟೆವು. ತಾಲ್ಲೂಕಾಪಂಚಾಯಿತಿ ಅಧ್ಯಕ್ಷರು ತತ್ಸಂಬಂಧವಾದ ಜಿಲ್ಲಾಪಂಚಾಯಿತಿ ಅಧ್ಯಕ್ಷರು ಹಾಗೇ ಉಪಾಧ್ಯಕ್ಷರು

ಮತ್ತೆ ಅದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳನ್ನು ತಂದು ಅದನ್ನು ಈಗ ಬದಲಿಸಿ ಈ ಕಾನೂನನ್ನು ತರುವ ಪ್ರಯತ್ನ ಮಾಡಿದ್ದೇವೆಯೇ ವಿನಹ ಬೇರೆ ಯಾವುದೇ ದೃಷ್ಟಿಯಿಂದ ಇರತಕ್ಕದ್ದಲ್ಲ. ಅಧ್ಯಕ್ಷರೇ, ಇನ್ನು ಗ್ರಾಮ ಪಂಚಾಯಿತಿಯೊಳಗೆ ಅಕೌಂಟಬಿಲಿಟಿ ಬಗ್ಗೆ ಪ್ರಸ್ತಾಪ ಮಾಡಿದರು. ಎಲ್ಲರೂ ತಮ್ಮ ವ್ಯಾಪ್ತಿಯಲ್ಲಿ ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆ. ಒಂದು ಜವಾಬ್ದಾರಿ ಸ್ಥಾನ ತೆಗೆದುಕೊಂಡ ಸಂದರ್ಭದಲ್ಲಿ ತಮ್ಮನ್ನು ಆಯ್ಕೆ ಮಾಡಿರುವ ಯಾವುದೇ ವಿಧದ ಜನಸಮೂಹ ಇರಲಿ ಅವರಿಗೆ ಆರಿಸಿಬಂದವರು ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಐಪಿಸಿ ಕೆಳಗೆ 21 ಸೆಕ್ಷನ್ ಏನಿದೆ ಎಲ್ಲರೂ ಪಬ್ಲಿಕ್ ಸರ್ವೆಂಟಾಗಿ ಕೆಲಸ ಮಾಡಬೇಕಾಗುತ್ತದೆ. ಅವರ ಅಕೌಂಟಬಿಲಿಟಿ ಇದ್ದೇ ಇದೆ. ಅಂದರೆ ನಿಜವಾದ ಕಾನೂನಿನಲ್ಲಿ ಪ್ರಶ್ನೆ ಮಾಡದೇ ಹೋಗಿದ್ದರೂ ಕೂಡ ಈರೀತಿಯಾದ ಅಕೌಂಟಬಿಲಿಟಿ ಇದ್ದೇ ಇರುತ್ತದೆ. ಮತ್ತೆ ಎರಡನೆಯದು, ಪ್ರಮೀಳಾ ಅವರು ಏನು ಪ್ರಸ್ತಾಪಿಸಿದರು, ಎಕ್ಸಿಕ್ಯುಟಿವ್ ಹೆಡ್ ಅಂದರೆ ರಾಷ್ಟ್ರಪತಿ, ಇಲ್ಲಿ ಮಾತ್ರ ರಾಜ್ಯಪಾಲ ಅಂತ ಹಾಗಲ್ಲ, ಇಲ್ಲಿ ಮಂತ್ರಿಗಳಾಗಿ ಅವರು ಕೆಲಸ ಮಾಡಿಲ್ಲ. ಅವರು ಮಂತ್ರಿಗಳಾಗುತ್ತಾರೆಂದು ಏನಾದರೂ ಕನಸಿದ್ದರೆ, ಅದು ಬರೀ ಭ್ರಮೆ ಪಾಪ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಭ್ರಮೆ ಏನ್ನುವ ಪ್ರಶ್ನೆ ಬೇಡ, ತಾವು ಅಲ್ಲಿದ್ದುಕೊಂಡು ಯಾವ ರೀತಿ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂಬುದು ನನಗೆ ಗೊತ್ತಿದೆ.

ಶ್ರೀ ಎಂ. ಪಿ. ಪ್ರಕಾಶ್ : ತಮ್ಮ ಪಕ್ಷದಿಂದ ಅಧಿಕಾರಕ್ಕೆ ಬೇಗನೆ ಬರಬಹುದು ಎನ್ನುವುದು ಸ್ವಲ್ಪ ದೂರ ಹೋಗಿದೆ. ತಾವು ಪಕ್ಷ ಬದಲಿ ಮಾಡಿದರೆ ನಾನು ಹೇಳಲಾರೆ.

ಶ್ರೀ ವಾಟಾಳ್ ನಾಗರಾಜ್ : ನೇರವಾಗಿ ಮಂತ್ರಿಗಳೇ ಆಗುವುದಿಲ್ಲವೆಂದರೆ ಪರಿಸ್ಥಿತಿ ಏನು?

ಅಧ್ಯಕ್ಷರು : ಇವತ್ತಿನ ಸ್ಥಿತಿಯನ್ನು ಆಧರಿಸಿ ಆ ಮಾತನ್ನು ಹೇಳಿದರು.

ಶ್ರೀ ಬಿ.ಬಿ. ಶಿವಪ್ಪ : ಒಂದು ಕಾಲದಲ್ಲಿ ಇವರು 138 ಇದ್ದರು, 134ಕ್ಕೆ ಬಂದರು. ಈಗ ಯಾವುದೋ ಕಾರಣಕ್ಕೆ 108ಕ್ಕೆ ಹೋಗಿದ್ದಾರೆ. ರಾಜಕೀಯದಲ್ಲಿ ಏರುಪೇರು ಇದ್ದದ್ದೇ. ಮಾನ್ಯ ಪ್ರಕಾಶರವರು ಅಷ್ಟು ಸಣ್ಣದಾಗಿ ಹೇಳಬಾರದು. ಅವರು ಹಿರಿಯ ಮಂತ್ರಿಗಳು ಜ್ಞಾನಿಗಳು ಕವಿಗಳು ಇದೆಲ್ಲವನ್ನೂ ಇಟ್ಟುಕೊಂಡು ಒಂದೇ ಸಾರಿಗೆ ನೀವು ಮಂತ್ರಿಗಳಾಗುವುದಿಲ್ಲ ಆ ಪಕ್ಷ ಬರುವುದಿಲ್ಲವೆಂಬ ಮಾತೇನು ಇದೆ, ಈ ಮಾತು ಮಾನ್ಯ ಪ್ರಕಾಶರವರು ಹೇಳುವಂತಹ ಮಾತಲ್ಲ. ಬೇರೆ ಯಾರಾದರೂ ಹೇಳಿದ್ದರೆ ಕೇಳಬಹುದಿತ್ತು.

ಅಧ್ಯಕ್ಷರು : ನೀವು ಮಾನ್ಯ ಪ್ರಕಾಶ್‌ರವರ ಬಗ್ಗೆ ಅಷ್ಟು ಮಾತನಾಡುವುದು ನೋಡಿದರೆ, ನೀವೇನೋ ಗಾಡಿ ಬಿಡುವ ಹಾಗೆ ಕಾಣುತ್ತಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಅವರಲ್ಲೂ ಶ್ರೀಮತಿ ಪ್ರಮೀಳಾ ಅವರಿಗೆ, ಇಲ್ಲಿರತಕ್ಕಂತಹ 40 ಜನ ಮಂತ್ರಿಗಳಲ್ಲಿ ಅವರು ಮೊದಲನೇ ಸ್ಥಾನವನ್ನು ಪಡೆಯುತ್ತಾರೆ ಅದರಲ್ಲಿ ಏನೇನು ಅನುಮಾನ ಇಲ್ಲ. ಮಂತ್ರಿಯಾಗುವುದಕ್ಕೆ ಎಲ್ಲ ಅರ್ಹತೆಯನ್ನು ಪಡೆದಿರತಕ್ಕಂತಹ ಒಬ್ಬ ಹೆಣ್ಣು ಮಗುವಿಗೆ ಏಕಾಏಕಿ

ನೀವು ಮಂತ್ರಿಯಾಗುವುದು ಭ್ರಮೆ ಎಂದು ಹೆಚ್ಚರ ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಹೆಣ್ಣು ಮಗು ಅಲ್ಲ. ಅವರು ಮಗುವಾದರೆ ಇಲ್ಲಿ ಬರುವುದಕ್ಕೆ ಸಾಧ್ಯವೇ? ಮಗು ಅಲ್ಲ.

ಅಧ್ಯಕ್ಷರು : ಕನ್ನಡ ಬಳಸುವಾಗ ಗೌರವದಿಂದ ಹೆಣ್ಣುಮಕ್ಕಳು ಅಂತ ಹೇಳಿ, ಮಾತನಾಡುವುದೇ ಗೌರವವಾದ ಸಂಬೋಧನೆ. ಹೆಂಗಸರು ಅಂದರೆ, ಅದಕ್ಕೆ ಕೆಟ್ಟ ಅರ್ಥ ಕೊಡುತ್ತದೆ. ಆದ್ದರಿಂದ ನಮ್ಮ ಹಳೆಯ ಮೈಸೂರು ಭಾಗದಲ್ಲಿ ನಾವು ಸಾಮಾನ್ಯವಾಗಿ ಹೆಂಗಸರೆಂದು ಬಳಸುತ್ತೇವೆ ಅದು ತಪ್ಪು. ಹೆಣ್ಣುಮಕ್ಕಳೆಂದು ಬಳಸತಕ್ಕಂಥದ್ದು ಸರಿ. ಬಿಟ್ಟರಿಗೇ ಅಸ್ಸಾಯಿಸಿ ಮಾತನಾಡುವಾಗ ಹೆಣ್ಣು ಮಗು ಎಂದು ಹೇಳುತ್ತಾರೆ ಅವರು ಉಚ್ಚಾರಣೆ ಮಾಡಿದ್ದು ಸರಿ. ನೀವು ನಮ್ಮ ಮೈಸೂರು ಅರ್ಥದಲ್ಲಿ ಹೇಳಿದಿರಿ. ಅವರು ಬಿಜಾಪುರದಲ್ಲಿ ಸಂಬಂಧ ಮಾಡುವುದಕ್ಕೆ ಉತ್ತರ ಕರ್ನಾಟಕದ ರೀತಿಯಲ್ಲಿ ಮಾತನಾಡಿದ್ದಾರೆ. ವಯಸ್ಸಿಗೆ ತಕ್ಕಂತೆ ಹೇಳಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಶಿವಪ್ಪನವರು ಹೇಳಿದಂತೆ ನಮ್ಮ ಕಾಲೇಜಿನ ದಿನಗಳಲ್ಲೇ ಅವರನ್ನು ನಮ್ಮ ನಾಯಕರೆಂದು ಒಪ್ಪಿಕೊಂಡಿದ್ದೇವೆ. ಅವರು ನಮ್ಮ ಜೊತೆಯಲ್ಲೇ ಇದ್ದಿದ್ದರೆ ಈಗ ನಮ್ಮೆಲ್ಲರಿಗಿಂತ ಸಮರ್ಥರಾಗಿ ಇರುತ್ತಿದ್ದರು. ಆ ಕಾರಣಕ್ಕಾಗಿ ಹೇಳಿದನೇ ವಿನಃ ಬೇರೆ ಕಾರಣಕ್ಕಾಗಿ ಅಲ್ಲ.

ಅಧ್ಯಕ್ಷರು : ನಾನು ಹೇಳಿದ್ದು ಈಗ ನಿಜವಾಯಿತು.

ಶ್ರೀ ವಾಟಾಳ್ ನಾಗರಾಜ್ : ಶಿವಪ್ಪನವರೇ ಅವರು ಹೇಳುತಕ್ಕಂತಹ ಮಾತಿಗೆ ನೀವು ಆಸೆ ಬಿದ್ದು ಕೆಟ್ಟುಬಿಟ್ಟು ಆ ಕಡೆಗೆ ಹೋದೀರಿ.

ಶ್ರೀ ಬಿ.ಬಿ. ಶಿವಪ್ಪ : ನಾನೇನಾದರೂ ಆ ಕಡೆಗೆ ಬರುವುದಾದರೆ ಮಾನ್ಯ ವಾಟಾಳ್ ನಾಗರಾಜ್ ರವರನ್ನು ಕರೆದುಕೊಂಡೇ ಬರುವುದು.

ಶ್ರೀ ವಾಟಾಳ್ ನಾಗರಾಜ್ : ನಾನೆಂದೂ ಇವರ ಜೊತೆಯಲ್ಲೂ ಬರುವುದಿಲ್ಲ. ನಿಮ್ಮ ಜೊತೆಯಲ್ಲೂ ಬರುವುದಿಲ್ಲ.

ಅಧ್ಯಕ್ಷರು : ನಾನೆಲ್ಲೂ ನಿಮಗೆ ಒಳ್ಳೆಯದಾಗುತ್ತದೆಂದು ಯೋಚನೆ ಮಾಡಿದರೆ.........

ಶ್ರೀ ಎಂ.ಪಿ. ಪ್ರಕಾಶ್ : ಆ ಕಾರಣದಿಂದ ಬಹಳ ಸೀಮಿತವಾಗಿರತಕ್ಕಂತಹ ಈ ತಿದ್ದುಪಡಿಯನ್ನು ಅಧ್ಯಾದೇಶವನ್ನು ಬದಲಿಸಿ ಏನು ತಂದಿದ್ದೇವೆ ಅದನ್ನು ತಿದ್ದುಪಡಿ ಮಾಡತಕ್ಕಂಥದ್ದನ್ನು ಸದನದಲ್ಲಿ ಒಪ್ಪಿದ್ದೀರಿ, ದಯವಿಟ್ಟು ಇದಕ್ಕೆ ಮನ್ನಣೆ ನೀಡಿ ಸದನ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : 1996ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7 ರವರೆಗೆ

ಅಧ್ಯಕ್ಷರು : ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತ ವಿಧೇಯಕಕ್ಕೆ ಸೇರಿಸಲಾಯಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾಪವೇನೆಂದರೆ

"ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ : (ಪಂಚಾಯತ್‌ರಾಜ್ ಮಂತ್ರಿಗಳು) : ತಮ್ಮ ಅಪ್ಪಣೆ ಪಡೆದು 1996 ರನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಈ ಸದನಕ್ಕೆ ನಾನು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾಪವೇನೆಂದರೆ,

1996ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಬೆಂಗಳೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕ 1996

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "1996ರ ಬೆಂಗಳೂರು ಅರಮನೆ ಮತ್ತ ಅರ್ಜನೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ ಹಾಗೂ ವಿಧೇಯಕವನ್ನು" ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.